# ಅಧ್ಯಾಯ–1

# ಅವಲೋಕನ

# ಅಧ್ಯಾಯ 1 – ಅವಲೋಕನ

## 1.1 ಪೀಠಿಕೆ

ಈ ಅಧ್ಯಾಯವು ರಾಜ್ಯದ ಸಂಕ್ಷಿಪ್ತ ಚಿತ್ರವನ್ನು ಒದಗಿಸುತ್ತದೆ ಮತ್ತು ವರದಿಯ ಆಧಾರ ಮತ್ತು ವಿಧಾನವನ್ನು ವಿವರಿಸುತ್ತದೆ. ವರದಿಗೆ ಆಧಾರವಾಗಿರುವ ದತ್ತಾಂಶವು ಸರ್ಕಾರಿ ಲೆಕ್ಕಗಳ ರಚನೆ, ಆಯವ್ಯಯ ಪ್ರಕ್ರಿಯೆಗಳು, ಪ್ರಮುಖ ಸೂಚ್ಯಂಕಗಳ ಸ್ಥೂಲವಿತ್ತೀಯ ವಿಶ್ಲೇಷಣೆ ಮತ್ತು ಕೊರತೆಗಳು/ಹೆಚ್ಚಳ ಸೇರಿದಂತೆ ರಾಜ್ಯದ ಹಣಕಾಸಿನ ಸ್ಥಿತಿಯ ಅವಲೋಕನವನ್ನು ಒದಗಿಸುತ್ತದೆ.

## 1.2 ರಾಜ್ಯದ ಸಂಕ್ಷಿಪ್ತ ಚಿತ್ರ

- **ಸಾಮಾಜಿಕ ಸೂಚಕಗಳು**

ಕರ್ನಾಟಕವು ಭೌಗೋಳಿಕ ವಿಸ್ತೀರ್ಣದಲ್ಲಿ (1,91,791 ಚ.ಕಿ.ಮೀ) ರಾಷ್ಟ್ರದ ಆರನೇ ಅತಿದೊಡ್ಡ ರಾಜ್ಯವಾಗಿದೆ ಮತ್ತು ಜನಸಂಖ್ಯೆಯಲ್ಲಿ ಎಂಟನೇ ದೊಡ್ಡ ರಾಜ್ಯವಾಗಿದೆ. ರಾಜ್ಯದ ಜನಸಂಖ್ಯೆಯು 6.11 ಕೋಟಿಗಳು (2011ರ ಜನಗಣತಿ) ಮತ್ತು ಸುಮಾರು ಶೇಕಡಾ 16ರಷ್ಟು ದಶಕ(2001–11) ಬೆಳವಣಿಗೆಯನ್ನು ದಾಖಲಿಸಿದೆ. ಅಖಿಲ ಭಾರತದ ಸರಾಸರಿ 21.90 (2011–12) ಕ್ಕೆ ಹೋಲಿಸಿದರೆ ಬಡತನ ರೇಖೆಗಿಂತ ಕೆಳಗಿರುವ ಜನಸಂಖ್ಯೆಯ ಶೇಕಡಾವಾರು ಪ್ರಮಾಣವು 20.90[1] ಆಗಿತ್ತು. ಸಾಕ್ಷರತೆ ಪ್ರಮಾಣವು ಶೇಕಡ 75.36ರಷ್ಟಿದೆ (2011ರ ಜನಗಣತಿ). ರಾಜ್ಯವು 30 ಜಿಲ್ಲೆಗಳು ಮತ್ತು 176 ತಾಲೂಕುಗಳನ್ನು ಹೊಂದಿದೆ.

- **ಆರ್ಥಿಕ ಸೂಚಕಗಳು**

2020–21ರಲ್ಲಿ ಮಾರುಕಟ್ಟೆ ಬೆಲೆಯಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನವು (ರಾಒಆಂಉ) ₹18,03,609 ಕೋಟಿಗಳಾಗಿದ್ದು, ಹಿಂದಿನ ವರ್ಷಕ್ಕಿಂತ ಶೇಕಡ 10.72ರಷ್ಟು ವೃದ್ಧಿಯ ದರವನ್ನು ಹೊಂದಿದೆ. ಕೃಷಿ, ಕೈಗಾರಿಕೆಗಳು ಮತ್ತು ಸೇವಾ ವಿಭಾಗಗಳ ರಾಒಆಂಉದ ವೃದ್ಧಿಯ ದರವು ಹಿಂದಿನ ವರ್ಷಕ್ಕಿಂತ ಕ್ರಮವಾಗಿ ಶೇಕಡ 10.04, ಶೇಕಡ (–) 4.66 ಮತ್ತು ಶೇಕಡ 2.34 ರಷ್ಟಿದೆ.

ರಾಷ್ಟ್ರೀಯ ತಲಾವಾರು ಒಟ್ಟು ಆಂತರಿಕ ಉತ್ಪನ್ನವು ₹1,41,945ರಷ್ಟಿದ್ದು ಪ್ರತಿಯಾಗಿ ತಲಾವಾರು ರಾಜ್ಯದ ಒಟ್ಟು ಆಂತರಿಕ ಉತ್ಪನ್ನವು (ರಾಒಆಂಉ) ₹2,49,947 ಆಗಿತ್ತು. ಪ್ರಸಕ್ತ ಬೆಲೆಗಳಲ್ಲಿ ರಾಜ್ಯದ ನಿವ್ವಳ ತಲಾ ಆದಾಯವು ದೇಶದ ಸರಾಸರಿ ₹1,26,968[2]ರ ಪ್ರತಿಯಾಗಿ ₹2,26,796 ಆಗಿದೆ (ಮಾರ್ಚ್ 2021 ರಲ್ಲಿ ಇದ್ದಂತೆ – ಆರ್ಥಿಕ ಸಮೀಕ್ಷೆ, ಕರ್ನಾಟಕ ಸರ್ಕಾರ – 2020–21). ರಾಜ್ಯಕ್ಕೆ ಸಂಬಂಧಿಸಿದ ಸಾಮಾನ್ಯ ಮತ್ತು ಹಣಕಾಸಿನ ದತ್ತಾಂಶವನ್ನು **ಅನುಬಂಧ 1.1**ರಲ್ಲಿ ನೀಡಲಾಗಿದೆ.

### *1.2.1 ರಾಜ್ಯದ ಒಟ್ಟು ಆಂತರಿಕ ಉತ್ಪನ್ನ*

ರಾಜ್ಯದ ಒಟ್ಟು ಆಂತರಿಕ ಉತ್ಪನ್ನ ಎನ್ನುವುದು ಒಂದು ನಿರ್ದಿಷ್ಟ ಅವಧಿಯಲ್ಲಿ ರಾಜ್ಯದ ಗಡಿಯೊಳಗೆ ಉತ್ಪಾದಿಸಲಾದ ಅಧಿಕೃತವಾಗಿ ಗುರುತಿಸಲ್ಪಟ್ಟ ಎಲ್ಲಾ ಸರಕು ಮತ್ತು ಸೇವೆಗಳ ಮಾರುಕಟ್ಟೆ ಮೌಲ್ಯವಾಗಿದೆ. ರಾಒಆಂಉವು ಆರ್ಥಿಕತೆಯ ಬದಲಾಗುತ್ತಿರುವ ಚಿತ್ರವನ್ನು ಸೂಚಿಸುವುದರಿಂದ ಅದಕ್ಕೆ ವಿಭಾಗವಾರು ಕೊಡುಗೆಯಲ್ಲಿನ ಬದಲಾವಣೆಗಳನ್ನು ಅರ್ಥಮಾಡಿಕೊಳ್ಳುವುದು ಮುಖ್ಯವಾಗಿದೆ. ಆರ್ಥಿಕ

[1] 2020–21ರ ಭಾರತದ ಆರ್ಥಿಕ ಸಮೀಕ್ಷೆಯ ಪ್ರಕಾರ

[2] 2020–21ರಲ್ಲಿ ರಾಜ್ಯದ ತಲಾ ಆದಾಯ ಮತ್ತು ರಾಷ್ಟ್ರೀಯ ಸರಾಸರಿ ನಡುವಿನ ವ್ಯತ್ಯಾಸವು ₹99,828 ಆಗಿತ್ತು

ಚಟುವಟಿಕೆಯನ್ನು ಸಾಮಾನ್ಯವಾಗಿ ಪ್ರಾಥಮಿಕ, ಮಾಧ್ಯಮಿಕ ಮತ್ತು ತೃತೀಯ ವಲಯಗಳಾಗಿ ವಿಂಗಡಿಸಲಾಗಿದ್ದು ಇದು ಕೃಷಿ, ಕೈಗಾರಿಕೆ ಮತ್ತು ಸೇವಾ ಕ್ಷೇತ್ರಗಳಿಗೆ ಅನುಗುಣವಾಗಿರುತ್ತದೆ. ಪ್ರಸಕ್ತ ಬೆಲೆಗಳಲ್ಲಿ ಒಟ್ಟು ಆಂತರಿಕ ಉತ್ಪನ್ನ ಮತ್ತು ರಾಜ್ಯದ ವಾರ್ಷಿಕ ವೃದ್ಧಿಯಲ್ಲಿನ ಪ್ರವೃತ್ತಿಗಳನ್ನು **ಕೋಷ್ಟಕ 1.1** ರಲ್ಲಿ ಸೂಚಿಸಲಾಗಿದೆ ಮತ್ತು ಪ್ರಸಕ್ತ ಬೆಲೆಗಳು ಮತ್ತು ಸ್ಥಿರ ಬೆಲೆಗಳಲ್ಲಿ ಒಟ್ಟು ಆಂತರಿಕ ಉತ್ಪನ್ನ ಮತ್ತು ರಾಒಆಂಉದ ವೃದ್ಧಿಯ ದರವನ್ನು **ನಕ್ಷೆ 1.1**ರಲ್ಲಿಚಿತ್ರಿಸಲಾಗಿದೆ.


**ಕೋಷ್ಟಕ 1.1 – ಒಟ್ಟು ಆಂತರಿಕ ಉತ್ಪನ್ನಕ್ಕೆ ಹೋಲಿಸಿದಂತೆ ರಾಒಆಂಉದ ಪ್ರವೃತ್ತಿಗಳು**

| ವರ್ಷ | 2016–17 | 2017–18 | 2018–19 | 2019–20 | 2020–21 |
|---|---|---|---|---|---|
| ಭಾರತದ ಜಿಡಿಪಿ* (₹ ಕೋಟಿಗಳಲ್ಲಿ) | 1,53,91,668 | 1,70,90,042 | 1,88,86,959 | 2,03,51,012 | 1,94,81,975 |
| ವೃದ್ಧಿಯ ದರ (ಶೇಕಡಾವಾರು) | 11.76 | 11.03 | 10.51 | 7.75 | (–)4.27 |
| ರಾಒಆಂಉ# (₹ ಕೋಟಿಗಳಲ್ಲಿ) | 12,07,608 | 13,36,914 | 14,90,624 | 16,28,928 | 18,03,609 |
| ವೃದ್ಧಿಯ ದರ (ಶೇಕಡಾವಾರು) | 15.54 | 10.71 | 11.50 | 9.28 | 10.72 |

*ಆಕರ: *ಅಖಿಲ ಭಾರತ ಒಟ್ಟು ಆಂತರಿಕ ಉತ್ಪನ್ನದ ಮತ್ತು ರಾಒಆಂಉದ (2016–17 ರಿಂದ 2019–20) ಅಂಕಿ ಅಂಶಗಳು ಕರ್ನಾಟಕ ಸರ್ಕಾರ ಆರ್ಥಿಕ ಸಮೀಕ್ಷೆ – 2020–21ರಿಂದ.*

*# ರಾಒಆಂಉದ ಅಂಕಿ ಅಂಶಗಳು 2020–21– ಅಂಕಿಅಂಶಗಳು ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯದ ಪ್ರಕಾರ.*

**ನಕ್ಷೆ – 1.1: ಭಾರತದ ಒಟ್ಟು ಆಂತರಿಕ ಉತ್ಪನ್ನ ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ವೃದ್ಧಿ**





**ಕೋಷ್ಟಕ 1.1** ಮತ್ತು **ನಕ್ಷೆ 1.1**ರಲ್ಲಿ ನೋಡಿದಂತೆ, ಪ್ರಸಕ್ತ ಬೆಲೆಗಳು ಮತ್ತು ಸ್ಥಿರ ಬೆಲೆಗಳಲ್ಲಿ ಕರ್ನಾಟಕದ ಒಟ್ಟು ಆಂತರಿಕ ಉತ್ಪನ್ನದ ವೃದ್ಧಿಯ ದರವು ಹೆಚ್ಚಿನ ವರ್ಷಗಳಲ್ಲಿ ರಾಷ್ಟ್ರದ ವೃದ್ಧಿಯ ದರಕ್ಕಿಂತ ಹೆಚ್ಚಾಗಿದೆ. ಆದಾಗ್ಯೂ, ಹಿಂದಿನ ಮೂರು ವರ್ಷಗಳಿಗೆ ಹೋಲಿಸಿದರೆ, 2020–21ರಲ್ಲಿ ಪ್ರಸಕ್ತ ಬೆಲೆಯಲ್ಲಿ ರಾಒಆಂಉವು ಹೆಚ್ಚಿದ್ದರೆ, ಸ್ಥಿರಬೆಲೆಯಲ್ಲಿ ಐದು ವರ್ಷಗಳಲ್ಲಿ ಕಡಿಮೆ ವೃದ್ಧಿಯ ದರವನ್ನು ದಾಖಲಿಸಿದೆ. 2016–17 ರಿಂದ 2020–21ರ ಅವಧಿಯಲ್ಲಿ, ರಾಒಆಂಉಕ್ಕೆ ಕೈಗಾರಿಕೆ, ಉತ್ಪನ್ನ ತೆರಿಗೆಗಳು[3] ಮತ್ತು

[3] ಉತ್ಪನ್ನದ ಮೇಲಿನ ತೆರಿಗೆಗಳು ಅಥವಾ ಸಹಾಯಧನಗಳನ್ನು ಉತ್ಪನ್ನದ ಘಟಕವನ್ನಾಗಿ ಪಾವತಿಸಲಾಗುತ್ತದೆ/ ಸ್ವೀಕರಿಸಲಾಗುತ್ತದೆ. ಉದಾಹರಣೆಯಾಗಿ ಉತ್ಪನ್ನದ ಮೇಲಿನ ತೆರಿಗೆಗಳಿಗೆ ಅಬಕಾರಿ ತೆರಿಗೆ, ಮಾರಾಟ ತೆರಿಗೆ, ಸೇವಾ ತೆರಿಗೆ ಮತ್ತು ಆಮದು ಮತ್ತು ರಫ್ತು ಸುಂಕಗಳಾಗಿವೆ. ಬ್ಯಾಂಕಿನ ಮೂಲಕ ಪಡೆಯುವ ಉತ್ಪನ್ನ ಸಹಾಯಧನಗಳು ಆಹಾರ,

ಸಹಾಯಧನಗಳ ತುಲನಾತ್ಮಕ ಪಾಲು ಕಡಿಮೆಯಾಗಿದ್ದರೆ ಕೃಷಿ ಮತ್ತು ಸೇವಾ ವಲಯದ ಪಾಲು ಹೆಚ್ಚಾಗಿದೆ ಎಂಬುದು **ನಕ್ಷೆ 1.2** ತಿಳಿಸುತ್ತದೆ,

**ನಕ್ಷೆ–1.2: ರಾಒಆಂಉಕ್ಕೆ ವಿಭಾಗೀಯ ಕೊಡುಗೆಯಲ್ಲಿ ಬದಲಾವಣೆ (2016–17 ಮತ್ತು 2020–21)**





*ಆಕರ: ಆರ್ಥಿಕ ಮತ್ತು ಅಂಕಿ ಅಂಶಗಳ ನಿರ್ದೇಶನಾಲಯ, ಕರ್ನಾಟಕ ಸರ್ಕಾರ*

*^ ರಾಒಆಂಉಕ್ಕೆ ವಿಭಾಗೀಯ ಕೊಡುಗೆ*

ಆದಾಗ್ಯೂ, ಹಿಂದಿನ ವರ್ಷಕ್ಕೆ ಹೋಲಿಸಿದರೆ, ಇದು ವಿಭಿನ್ನ ಸನ್ನಿವೇಶವನ್ನು ತೋರಿಸುತ್ತದೆ. 2020–21 ರಲ್ಲಿ, **ನಕ್ಷೆ 1.3**ರಲ್ಲಿ ಕಂಡುಬರುವಂತೆ ಎಲ್ಲಾ ಮೂರು ವಿಭಾಗಗಳಲ್ಲಿನ ವೃದ್ಧಿಯ ದರದಲ್ಲಿ ಕುಸಿತ ಕಂಡುಬಂದಿದೆ.

**ನಕ್ಷೆ–1.3: ರಾಒಆಂಉದಲ್ಲಿ ವಿಭಾಗೀಯ ವೃದ್ಧಿ**




*ಆಕರ: ಆರ್ಥಿಕ ಮತ್ತು ಅಂಕಿ ಅಂಶಗಳ ನಿರ್ದೇಶನಾಲಯ, ಕರ್ನಾಟಕ ಸರ್ಕಾರ*

---


ಪೆಟ್ರೋಲಿಯಮ್ ಮತ್ತು ಗೊಬ್ಬರ ಸಹಾಯಧನಗಳು, ರೈತರಿಗೆ ನೀಡಲಾಗುವ ಬಡ್ಡಿ ಸಹಾಯಧನಗಳು, ಗೃಹೋಪಯೋಗಿ ವಸ್ತುಗಳು ಮುಂತಾದವುಗಳನ್ನು ಒಳಗೊಂಡಿವೆ.

ಕೃಷಿ ವಿಭಾಗದಲ್ಲಿನ ಕುಸಿತವು ಮುಖ್ಯವಾಗಿ ಜಾನುವಾರು ಮತ್ತು ಮೀನುಗಾರಿಕೆಯ ವೃದ್ಧಿಯ ದರದಲ್ಲಿನ ಕುಸಿತದಿಂದಾಗಿದ್ದರೆ, ಕೈಗಾರಿಕಾ ವಿಭಾಗದಲ್ಲಿ ಗಣಿಗಾರಿಕೆ ಮತ್ತು ಕಲ್ಲು ಗಣಿಗಾರಿಕೆ ಮತ್ತು ನಿರ್ಮಾಣ ಕ್ಷೇತ್ರಗಳಲ್ಲಿನ ವೃದ್ಧಿಯ ದರದಲ್ಲಿನ ಕುಸಿತವು ಹಿಂದಿನ ವರ್ಷಕ್ಕೆ (2019–20) ಹೋಲಿಸಿದರೆ ಒಟ್ಟಾರೆ ಕುಸಿತಕ್ಕೆ ಕಾರಣವಾಗಿದೆ.

ಆರ್ಥಿಕ ಇಲಾಖೆಯು ಕೃಷಿ, ಕೈಗಾರಿಕೆ ಮತ್ತು ಸೇವಾ ವಿಭಾಗಗಳಲ್ಲಿನ ವೃದ್ಧಿಯ ದರದಲ್ಲಿನ ಕುಸಿತವು ಕೋವಿಡ್19/ ಸಾಂಕ್ರಾಮಿಕ ಪರಿಸ್ಥಿತಿಯಿಂದಾದ ಲಾಕ್ ಡೌನ್ ಹೇರಿಕೆಯು ಉತ್ಪಾದನೆ / ವ್ಯಾಪಾರ / ಸೇವಾ ವಲಯಗಳ ಮುಚ್ಚುವಿಕೆಯಲ್ಲಿ ಪರಿಣಮಿಸಿ ಆರ್ಥಿಕ ಚಟುವಟಿಕೆಗಳಲ್ಲಿ ನಿಧಾನಗತಿ ಉಂಟಾಯಿತು ಎಂದು ಉತ್ತರಿಸಿದೆ (ಡಿಸೆಂಬರ್ 2021).

2020–21 ರಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪಾದನೆಗೆ ವಿಭಾಗೀಯ ಕೊಡುಗೆಯನ್ನು **ನಕ್ಷೆ – 1.4** ರಲ್ಲಿ ನೀಡಲಾಗಿದೆ.

**ನಕ್ಷೆ –1.4: 2020–21ರಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪಾದನೆಗೆ ವಿಭಾಗೀಯ ಕೊಡುಗೆ**




*ಆಕರ: ಆರ್ಥಿಕ ಮತ್ತು ಅಂಕಿ ಅಂಶಗಳ ನಿರ್ದೇಶನಾಲಯ, ಕರ್ನಾಟಕ ಸರ್ಕಾರ*

## 1.3 ರಾಜ್ಯ ಹಣಕಾಸು ಲೆಕ್ಕಪರಿಶೋಧನಾ ವರದಿಗೆ ಆಧಾರ ಮತ್ತು ಅನುಸರಿಸಿದ ವಿಧಾನ

ರಾಜ್ಯ ಹಣಕಾಸು ವ್ಯವಹಾರಗಳ ಲೆಕ್ಕ ಪರಿಶೋಧನಾ ವರದಿಯನ್ನು ಭಾರತದ ಸಂವಿಧಾನದ 151(2) ನೇ ಅನುಚ್ಛೇದದ ಅಡಿಯಲ್ಲಿ ಸಿದ್ಧಪಡಿಸಲಾಗುತ್ತದೆ. ಇದು ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು (ಸಿಎಜಿ) ಅವರು ರಾಜ್ಯದ ಲೆಕ್ಕಗಳಿಗೆ ಸಂಬಂಧಿಸಿದ ವರದಿಗಳನ್ನು ಸಲ್ಲಿಸಬೇಕು ಎಂದು ವಿಧಿಸುತ್ತದೆ. ರಾಜ್ಯದ ರಾಜ್ಯಪಾಲರು, ಈ ವರದಿಗಳನ್ನು ರಾಜ್ಯದ ಶಾಸಕಾಂಗದ ಮುಂದೆ ಮಂಡಿಸುತ್ತಾರೆ.

ಪ್ರಧಾನ ಮಹಾಲೇಖಾಪಾಲರು (ಲೆಕ್ಕ ಮತ್ತು ಹಕ್ಕುದಾರಿ) ಖಜಾನೆಗಳು, ಆರಂಭಿಕ ಮತ್ತು ಪೂರಕ ಲೆಕ್ಕ ನಿರ್ವಹಣಾ ಜವಾಬ್ದಾರಿಯನ್ನು ಹೊಂದಿರುವ ಕಛೇರಿಗಳು ಹಾಗೂ ಇತರ ಇಲಾಖೆಗಳು ಸಲ್ಲಿಸುವ ಲೆಕ್ಕಗಳು ಮತ್ತು ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ಪಡೆದ ವಿವರಣಾ ಪಟ್ಟಿಗಳಿಂದ ಪ್ರತಿ ವರ್ಷ ರಾಜ್ಯದ ಹಣಕಾಸು ಲೆಕ್ಕಗಳು ಮತ್ತು ಧನವಿನಿಯೋಗ ಲೆಕ್ಕಗಳನ್ನು ಸಿದ್ಧಪಡಿಸುತ್ತಾರೆ. ಈ ಲೆಕ್ಕಗಳನ್ನು ಪ್ರಧಾನ ಮಹಾಲೇಖಾಪಾಲರು (ಲೆಕ್ಕ ಪರಿಶೋಧನೆ–1) ಸ್ವತಂತ್ರವಾಗಿ ಪರಿಶೀಲಿಸುತ್ತಾರೆ. ಮತ್ತು ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕ ಪರಿಶೋಧಕರು ಪ್ರಮಾಣೀಕರಿಸುತ್ತಾರೆ.

ರಾಜ್ಯದ ಹಣಕಾಸು ಲೆಕ್ಕಗಳು ಮತ್ತು ಧನವಿನಿಯೋಗ ಲೆಕ್ಕಗಳು ಈ ವರದಿಯ ಪ್ರಮುಖ ದತ್ತಾಂಶಗಳಾಗಿವೆ ಇತರ ಮೂಲಗಳು ಈ ಕೆಳಗಿನವುಗಳನ್ನು ಒಳಗೊಂಡಿವೆ.

- ಪ್ರಕ್ಷೇಪಣಗಳಿಗೆ ಪ್ರತಿಯಾಗಿ ವಿತ್ತೀಯ ಪ್ರಮಿತಿಗಳು ಮತ್ತು ಹಂಚಿಕೆಯ ಆದ್ಯತೆಗಳ ಹಾಗೂ ಆಯವ್ಯಯ ಅನುಷ್ಠಾನದ ಪರಿಣಾಮಕಾರಿತ್ವವನ್ನು ಹಾಗೂ ಸಂಬಂಧಪಟ್ಟ ನಿಯಮಗಳು ಮತ್ತು ನಿಗದಿತ ಕಾರ್ಯ ವಿಧಾನಗಳ ಅನುಸರಣೆಯನ್ನು ನಿರ್ಧರಿಸಲು ರಾಜ್ಯದ ಆಯವ್ಯಯ ಅಂದಾಜುಗಳು;
- ಪ್ರಧಾನ ಮಹಾಲೇಖಾಪಾಲರು (ಲೆಕ್ಕ ಪರಿಶೋಧನೆ – I) ಮತ್ತು ಮಹಾಲೇಖಾಪಾಲರು (ಲೆಕ್ಕ ಪರಿಶೋಧನೆ – II) ಕಚೇರಿಯಿಂದ ನಡೆಸಿದ ಲೆಕ್ಕ ಪರಿಶೋಧನೆಯ ಫಲಿತಾಂಶಗಳು;
- ವಿವಿಧ ಸರ್ಕಾರಿ ಇಲಾಖೆಗಳು ಮತ್ತು ಸಂಸ್ಥೆಗಳಿಂದ ಪಡೆದ ಇತರ ಹಣಕಾಸು ದತ್ತಾಂಶ;
- ಕರ್ನಾಟಕ ಸರ್ಕಾರದ ಆರ್ಥಿಕ ಮತ್ತು ಅಂಕಿ ಅಂಶಗಳ ನಿರ್ದೇಶನಾಲಯದಿಂದ ಪಡೆದ ರಾಒಆಂಉದ ದತ್ತಾಂಶ ಮತ್ತು ಇತರ ರಾಜ್ಯ ಸಂಬಂಧಿತ ಅಂಕಿ ಅಂಶಗಳು;
- ಹದಿನಾಲ್ಕನೆಯ ಮತ್ತು ಹದಿನೈದನೆಯ ಹಣಕಾಸು ಆಯೋಗದ ಶಿಫಾರಸುಗಳು;
- ಕರ್ನಾಟಕ ವಿತ್ತೀಯ ಜವಾಬ್ದಾರಿ ಕಾಯಿದೆ 2002; ಮತ್ತು
- ಭಾರತ ಸರ್ಕಾರದ ಮಾರ್ಗಸೂಚಿಗಳು.

## 1.4 ಸರ್ಕಾರಿ ಲೆಕ್ಕಗಳ ರಚನೆ

ರಾಜ್ಯ ಸರ್ಕಾರದ ಲೆಕ್ಕಗಳನ್ನು ಮೂರು ಭಾಗಗಳಲ್ಲಿ ಇರಿಸಲಾಗಿದೆ.

**ಸಂಚಿತ ನಿಧಿ**

- ರಾಜಸ್ವ ಮತ್ತು ಬಂಡವಾಳ ಲೆಕ್ಕ, ಸಾರ್ವಜನಿಕ ಋಣ ಮತ್ತು ಸಾಲಗಳು ಮತ್ತು ಮುಂಗಡಗಳ ಎಲ್ಲ ಸ್ವೀಕೃತಿಗಳು ಮತ್ತು ವೆಚ್ಚಗಳು ಸಂವಿಧಾನದ 266(1)ನೇ ಅನುಚ್ಛೇದದಡಿ ಸ್ಥಾಪಿಸಲಾದ ರಾಜ್ಯದ ಸಂಚಿತ ನಿಧಿ ಎಂಬ ಹೆಸರಿನ ಒಂದು ಕ್ರೋಢೀಕೃತ ನಿಧಿಯಡಿ ಲೆಕ್ಕ ಮಾಡಲಾಗುತ್ತದೆ.

**ಸಾದಿಲ್ವಾರು ನಿಧಿ**

- ರಾಜ್ಯದ ಸಾದಿಲ್ವಾರು ನಿಧಿಯು ಸಂವಿಧಾನದ 267(2)ನೇ ಅನುಚ್ಛೇದದಡಿ ಸ್ಥಾಪಿಸಲಾಗಿರುವ ರಾಜ್ಯಪಾಲರ ವಿಲೇವಾರಿಯಲ್ಲಿರುವ ಮುಂಗಡ ಸ್ವರೂಪದ ನಿಧಿಯಾಗಿದ್ದು ಸರ್ಕಾರದ ಅನಿರೀಕ್ಷಿತ ವೆಚ್ಚಗಳನ್ನು ಭರಿಸಲು ಶಾಸಕಾಂಗದ ನಂತರದ ಅನುಮೋದನೆಗೆ ಒಳಪಟ್ಟು ಮುಂಗಡವಾಗಿ ನೀಡಲು ಅವಕಾಶವನ್ನು ಒದಗಿಸುತ್ತದೆ. ರಾಜ್ಯ ಸಂಚಿತ ನಿಧಿಯ ಕ್ರಿಯಾ ಪ್ರಧಾನ ಲೆಕ್ಕ ಶೀರ್ಷಿಕೆಗೆ ವೆಚ್ಚ ಹಾಕಿ ನಿಧಿಗೆ ಪುನರ್ಭರ್ತಿ ಮಾಡಲಾಗುತ್ತದೆ.

**ಸಾರ್ವಜನಿಕ ಲೆಕ್ಕ**

- ರಾಜ್ಯ ಸಂಚಿತ ನಿಧಿಯ ಭಾಗವಲ್ಲದ ಸಣ್ಣ ಉಳಿತಾಯಗಳು, ಭವಿಷ್ಯ ನಿಧಿ, ಮೀಸಲು ನಿಧಿ, ಠೇವಣಿಗಳು, ಅಮಾನತ್ತು ಮತ್ತು ಇರಸಾಲುಗಳು ಮುಂತಾದವುಗಳಿಗೆ ಸಂಬಂಧಿಸಿದ ಸ್ವೀಕೃತಿ ಮತ್ತು ವೆಚ್ಚಗಳ ಲೆಕ್ಕವನ್ನು ಸಂವಿಧಾನದ 266(2)ನೇ ಅನುಚ್ಛೇದದಡಿ ಸ್ಥಾಪಿಸಲಾದ ಸಾರ್ವಜನಿಕ ಲೆಕ್ಕದಡಿ ಇಡಲಾಗುತ್ತದೆ ಮತ್ತು ಈ ಲೆಕ್ಕದಡಿಯ ವ್ಯವಹಾರಗಳು ಶಾಸಕಾಂಗದ ಅನುಮೋದನೆಗೆ ಒಳಪಟ್ಟಿರುವುದಿಲ್ಲ.


ಭಾರತದ ಸಂವಿಧಾನದ 202ನೇ ವಿಧಿಯ ಅನ್ವಯ ರಾಜ್ಯ ಶಾಸಕಾಂಗದ ಉಭಯ ಸದನಗಳಿಗೆ ಆಯವ್ಯಯವನ್ನು ಮಂಡಿಸಬೇಕು. 'ವಾರ್ಷಿಕ ಹಣಕಾಸು ವಿವರಣಾ ಪಟ್ಟಿ'ಯು ಆಯವ್ಯಯದ ಮುಖ್ಯ ದಾಖಲೆಯಾಗಿದೆ. ಆಯವ್ಯಯವು ಕೆಳಗಿನವುಗಳನ್ನು ಒಳಗೊಂಡಿರುತ್ತದೆ.

- **ರಾಜಸ್ವ ಸ್ವೀಕೃತಿಗಳು** : ತೆರಿಗೆ ಆದಾಯ, ತೆರಿಗೆಯೇತರ ಆದಾಯ, ಕೇಂದ್ರ ತೆರಿಗೆಗಳು/ಸುಂಕಗಳ ಪಾಲು ಮತ್ತು ಭಾರತ ಸರ್ಕಾರದ ಅನುದಾನವನ್ನು ಒಳಗೊಂಡಿರುತ್ತದೆ.
- **ರಾಜಸ್ವ ವೆಚ್ಚ** : ಇದು ಭೌತಿಕ ಅಥವಾ ಹಣಕಾಸಿನ ಆಸ್ತಿಗಳ ಸೃಷ್ಟಿಗೆ ಕಾರಣವಾಗದ ಸರ್ಕಾರದ ಎಲ್ಲಾ ಖರ್ಚುಗಳನ್ನು ಒಳಗೊಂಡಿರುತ್ತದೆ. ಇದು ಸರ್ಕಾರಿ ಇಲಾಖೆಗಳು ಮತ್ತು ವಿವಿಧ ಸೇವೆಗಳ ಸಾಮಾನ್ಯ ಕಾರ್ಯ ನಿರ್ವಹಣೆಗೆ ತಗಲುವ ವೆಚ್ಚಗಳು, ಸರ್ಕಾರವು ಮಾಡಿದ ಸಾಲದ ಮೇಲಿನ ಬಡ್ಡಿ ಪಾವತಿಗಳು ಮತ್ತು ವಿವಿಧ ಸಂಸ್ಥೆಗಳಿಗೆ ನೀಡಿದ ಅನುದಾನಗಳಿಗೆ ಸಂಬಂಧಿಸಿದೆ (ಕೆಲವು ಅನುದಾನಗಳು ಆಸ್ತಿಗಳ ಸೃಷ್ಟಿಗೆ ಮೀಸಲಾಗಿರಬಹುದು).

- **ಬಂಡವಾಳ ಸ್ವೀಕೃತಿಗಳು** :
  - **ಋಣ ಸ್ವೀಕೃತಿಗಳು** : ಮಾರುಕಟ್ಟೆ ಸಾಲಗಳು, ಬಾಂಡ್‌ಗಳು, ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲಗಳು, ಮಾರ್ಗೋಪಾಯಗಳ ನಿವ್ವಳ ವಹಿವಾಟು, ಕೇಂದ್ರ ಸರ್ಕಾರದಿಂದ ಪಡೆದ ಸಾಲಗಳು ಮತ್ತು ಮುಂಗಡಗಳು ಇತ್ಯಾದಿಗಳನ್ನು ಒಳಗೊಂಡಿರುತ್ತವೆ.
  - **ಋಣೇತರ ಸ್ವೀಕೃತಿಗಳು** : ಬಂಡವಾಳ ಹಿಂತೆಗೆದುಕೊಳ್ಳುವಿಕೆ, ಸಾಲಗಳ ಮತ್ತು ಮುಂಗಡಗಳ ವಸೂಲಾತಿ.
- **ಬಂಡವಾಳ ವೆಚ್ಚ** : ಭೂಮಿ, ಕಟ್ಟಡ, ಯಂತ್ರೋಪಕರಣಗಳು, ಇತರ ಉಪಕರಣಗಳ ಖರೀದಿ, ಷೇರುಗಳಲ್ಲಿನ ಹೂಡಿಕೆ ಮತ್ತು ಸಾರ್ವಜನಿಕ ವಲಯದ ಉದ್ಯಮಗಳು ಮತ್ತು ಇತರ ಅಸ್ತಿತ್ವಗಳಿಗೆ ಸರ್ಕಾರ ನೀಡಿದ ಸಾಲಗಳು ಮತ್ತು ಮುಂಗಡಗಳನ್ನು ವೆಚ್ಚವನ್ನು ಒಳಗೊಂಡಿರುತ್ತದೆ.

ಹಣಕಾಸು ಲೆಕ್ಕಗಳ ವಿನ್ಯಾಸವನ್ನು **ಅನುಬಂಧ 1.2** ರಲ್ಲಿ ತೋರಿಸಲಾಗಿದೆ ಮತ್ತು ಸರ್ಕಾರಿ ಲೆಕ್ಕಗಳ ರಚನೆಯ ಚಿತ್ರಾತ್ಮಕ ರೂಪವನ್ನು **ನಕ್ಷೆ – 1.5** ರಲ್ಲಿ ನೀಡಲಾಗಿದೆ.

**ನಕ್ಷೆ – 1.5: ಸರ್ಕಾರಿ ಲೆಕ್ಕಗಳ ರಚನೆಯ ಚಿತ್ರಾತ್ಮಕ ರೂಪ**




## 1.5 ಆಯವ್ಯಯ ಪ್ರಕ್ರಿಯೆಗಳು

ಭಾರತದ ಸಂವಿಧಾನದ 202ನೇ ವಿಧಿಯ ಅನ್ವಯ, ರಾಜ್ಯದ ರಾಜ್ಯಪಾಲರು ಪ್ರತಿ ವರ್ಷದ ರಾಜ್ಯದ ಅಂದಾಜು ಸ್ವೀಕೃತಿಗಳು ಮತ್ತು ವೆಚ್ಚಗಳ ವಾರ್ಷಿಕ ವಿತ್ತ ವಿವರಣೆಯನ್ನು ರಾಜ್ಯ ಶಾಸಕಾಂಗದ ಮುಂದೆ ಇಡಬೇಕು. ಅನುಚ್ಛೇದ 203ರ ಪ್ರಕಾರ, ವಿತ್ತ ವಿವರಣೆಯನ್ನು ರಾಜ್ಯ ಶಾಸಕಾಂಗಕ್ಕೆ ಅನುದಾನಗಳು/ ವಿನಿಯೋಗಗಳ ಬೇಡಿಕೆಗಳ ರೂಪದಲ್ಲಿ ಸಲ್ಲಿಸಲಾಗುತ್ತದೆ. ಅನುಮೋದನೆಯ ನಂತರ, ಸಂಚಿತ ನಿಧಿಯಿಂದ ಅಗತ್ಯವಿರುವ ಹಣವನ್ನು ವಿನಿಯೋಗಿಸಲು ಅನುಚ್ಛೇದ 204ರ ಅಡಿಯಲ್ಲಿ ಧನವಿನಿಯೋಗ ಮಸೂದೆಯನ್ನು ಶಾಸಕಾಂಗವು ಅಂಗೀಕರಿಸುತ್ತದೆ. ಕರ್ನಾಟಕ ರಾಜ್ಯದಲ್ಲಿ, ಆಯವ್ಯಯ ದಾಖಲೆಗಳು

ಮಹಿಳಾ ಉದ್ದೇಶಿತ ಆಯವ್ಯಯ (**ಅಧ್ಯಾಯ–3 ಕಂಡಿಕೆ ಸಂಖ್ಯೆ 3.3**ರಲ್ಲಿ ವಿವರಿಸಲಾಗಿದೆ), ಮಕ್ಕಳ ಆಯವ್ಯಯ (**ಅಧ್ಯಾಯ–3 ಕಂಡಿಕೆ ಸಂಖ್ಯೆ 3.4**ರಲ್ಲಿ ವಿವರಿಸಲಾಗಿದೆ) ಮತ್ತು ಜಿಲ್ಲಾವಾರು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಯೋಜನೆವಾರು ಹಂಚಿಕೆಯ ದಾಖಲೆಗಳನ್ನು ಒಳಗೊಂಡಿವೆ.

ರಾಜ್ಯ ಆಯವ್ಯಯ ಕೈಪಿಡಿಯು ಆಯವ್ಯಯ ರಚನೆಯ ಪ್ರಕ್ರಿಯೆಯನ್ನು ಸೂಚಿಸುತ್ತದೆ ಮತ್ತು ರಾಜ್ಯ ಸರ್ಕಾರವು ಅದರ ವೆಚ್ಚ ಚಟುವಟಿಕೆಗಳನ್ನು ಮೇಲ್ವಿಚಾರಣೆ ಮಾಡಲು ಮಾರ್ಗದರ್ಶನ ನೀಡುತ್ತದೆ. ಆಯವ್ಯಯದ ಪರಿಶೀಲನೆಯ ಫಲಿತಾಂಶಗಳು ಮತ್ತು ರಾಜ್ಯ ಸರ್ಕಾರದ ಇತರ ಆಯವ್ಯಯ ಉಪಕ್ರಮಗಳ ಅನುಷ್ಠಾನದ ಫಲಿತಾಂಶಗಳನ್ನು ಈ ವರದಿಯ **ಅಧ್ಯಾಯ – 3**ರಲ್ಲಿ ಸೇರಿಸಲಾಗಿದೆ.

## 1.6 ರಾಜ್ಯ ಹಣಕಾಸುಗಳ ಕಿರುನೋಟ

2019–20ರ ವಾಸ್ತವಗಳನ್ನು 2020–21ರ ಆಯವ್ಯಯ ಅಂದಾಜುಗಳಿಗೆ ಹೋಲಿಸಿ ದಿಟವಾದ ಹಣಕಾಸಿನ ಫಲಿತಾಂಶಗಳ ವಿವರಗಳನ್ನು **ಕೋಷ್ಟಕ–1.2** ಒದಗಿಸುತ್ತದೆ.

**ಕೋಷ್ಟಕ 1.2: ಆಯವ್ಯಯ ಅಂದಾಜುಗಳಿಗೆ ಹೋಲಿಸಿದಂತೆ ವಾಸ್ತವ ಹಣಕಾಸು ಫಲಿತಾಂಶಗಳು**

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ಘಟಕಗಳು | 2019–20 (ವಾಸ್ತವ) | 2020–21 (ಆಯವ್ಯಯ ಅವಕಾಶ) | 2020–21 (ವಾಸ್ತವ) | ವಾಸ್ತವಕ್ಕೆ ಆಯವ್ಯಯ ಅವಕಾಶದ ಶೇಕಡಾವಾರು |
|---|---|---|---|---|---|
| ಭಾಗ–ಎ: ರಾಜಸ್ವ ಸ್ವೀಕೃತಿಗಳು | | | | | |
| 1 | ತೆರಿಗೆ ರಾಜಸ್ವ | 1,02,363 | 1,11,991 | 97,052* | 86.66 |
| 2 | ತೆರಿಗೆಯೇತರ ರಾಜಸ್ವ | 7,681 | 7,767 | 7,894 | 101.64 |
| 3 | ಕೇಂದ್ರ ತೆರಿಗೆ ಮತ್ತು ಸುಂಕಗಳಲ್ಲಿನ ಪಾಲು | 30,919 | 28,591 | 21,694 | 75.88 |
| 4 | ಸಹಾಯಾನುದಾನಗಳು ಮತ್ತು ವಂತಿಗೆಗಳು | 34,480 | 31,570 | 30,076^ | 95.27 |
| 5 | ರಾಜಸ್ವ ಸ್ವೀಕೃತಿಗಳು (1+2+3+4) | **1,75,443** | **1,79,920** | **1,56,716** | **87.10** |
| ಭಾಗ–ಬಿ: ಬಂಡವಾಳ ಸ್ವೀಕೃತಿಗಳು | | | | | |
| 6 | ಸಾಲಗಳು ಮತ್ತು ಮುಂಗಡಗಳ ವಸೂಲಾತಿ | 203 | 257 | 270 | 105.06 |
| 7 | ಇತರೆ ಬಂಡವಾಳ ಸ್ವೀಕೃತಿಗಳು | 45 | 40 | 45 | 112.50 |
| 8 | ಸಾರ್ವಜನಿಕ ಋಣ ಸ್ವೀಕೃತಿಗಳು | 50,459 | 52,917 | 84,528^^ | 159.74 |
| 9 | ಬಂಡವಾಳ ಸ್ವೀಕೃತಿಗಳು (6+7+8) | 50,707 | 53,214 | 84,843 | 159.44 |
| 10 | ಒಟ್ಟು ಸ್ವೀಕೃತಿಗಳು (5+9) | **2,26,150** | **2,33,134** | **2,41,559** | 103.61 |
| ಭಾಗ–ಸಿ: ವೆಚ್ಚ/ವಿತರಣೆ | | | | | |
| 11 | ರಾಜಸ್ವ ವೆಚ್ಚ | 1,74,258 | 1,79,776 | 1,76,054 | 97.93 |
| 12 | ಬಡ್ಡಿ ಪಾವತಿಗಳು | 19,903 | 22,216 | 23,433 | 105.47 |
| 13 | ಬಂಡವಾಳ ವೆಚ್ಚ | 35,530 | 43,059 | 45,406 | 105.45 |
| 14 | ಸಾಲಗಳು ಮತ್ತು ಮುಂಗಡಗಳು | 4,069 | 3,452 | 2,669 | 77.32 |
| 15 | **ಬಂಡವಾಳ ವೆಚ್ಚ (13+14)** | **39,599** | **46,511** | **48,075** | **103.36** |
| 16 | ಸಾರ್ವಜನಿಕ ಋಣಪಾವತಿಗಳು | 10,180 | 11,605 | 11,016 | 94.92 |
| 17 | **ಸಂಚಿತ ನಿಧಿಯಿಂದ ಒಟ್ಟು ವಿತರಣೆಗಳು (11+15+16)** | **2,24,037** | **2,37,892** | **2,35,145** | **98.42** |
| ಭಾಗ ಡಿ – ವಿತ್ತೀಯ ಸೂಚಕಗಳು | | | | | |
| 18 | ರಾಜಸ್ವ ಹೆಚ್ಚಳ/ಕೊರತೆ (5–11) | 1,185 | 144 | (–)19,338 | (–)13,429.17 |
| 19 | ವಿತ್ತೀಯ ಕೊರತೆ (–){(5+6+7)–(11+15)} | 38,166 | 46,070 | 67,098 | 145.64 |
| 20 | **ಪ್ರಥಮಿಕ ಕೊರತೆ (19–12)** | **18,263** | **23,854** | **43,665** | **183.05** |

*ಆಕರ: ಹಣಕಾಸು ಲೆಕ್ಕಗಳು, ವಾರ್ಷಿಕ ವಿತ್ತ ವಿವರಣೆ ಮತ್ತು ಮಧ್ಯಂತರ ವಿತ್ತ ಯೋಜನೆ 2019–23*

** ತೆರಿಗೆ ಆದಾಯವು ಪ್ರಧಾನ ಲೆಕ್ಕ ಶೀರ್ಷಿಕೆ 0005 – ಸಿಜಿಎಸ್‌ಟಿ (₹6,236.01 ಕೋಟಿ), 0006 – ಎಸ್‌ಜಿಎಸ್‌ಟಿ (₹37,711.18 ಕೋಟಿ) ಮತ್ತು 0008 – ಐಜಿಎಸ್‌ಟಿ (ಶೂನ್ಯ) ಗಳನ್ನು ಒಳಗೊಂಡಿದೆ.*

*# ಆಯವ್ಯಯ ಹೊರಗಿನ ಸಾಲಗಳ ಮೇಲಿನ ಬಡ್ಡಿಯನ್ನು ಒಳಗೊಂಡಿದೆ.*

*^ ಜಿಎಸ್‌ಟಿ ಜಾರಿಯಿಂದ ಉಂಟಾದ ಆದಾಯ ನಷ್ಟಕ್ಕೆ ಪಡೆದ ₹13,789 ಕೋಟಿಗಳ ಪರಿಹಾರವನ್ನು ಒಳಗೊಂಡಿದೆ*

*^^ ಋಣ ಸ್ವೀಕೃತಿಗಳಡಿಯಲ್ಲಿ ರಾಜ್ಯಕ್ಕೆ ಬ್ಯಾಕ್–ಟು–ಬ್ಯಾಕ್ ಸಾಲವಾಗಿ ನೀಡಲಾದ `12,407 ಕೋಟಿ ಸರಕು ಮತ್ತು ಸೇವಾ ತೆರಿಗೆ ಪರಿಹಾರವನ್ನು, ಹಣಕಾಸು ಆಯೋಗವು ಸೂಚಿಸಬಹುದಾದ ಯಾವುದೇ ಮಾನದಂಡಗಳಿಗೆ ರಾಜ್ಯದ ಸಾಲವೆಂದು ಪರಿಗಣಿಸಲಾಗುವುದಿಲ್ಲ ಎಂದು ಭಾರತ ಸರ್ಕಾರದ ವೆಚ್ಚದ ಇಲಾಖೆಯು ನಿರ್ಧರಿಸಿರುವುದರಿಂದ ನಿವ್ವಳ ಸಾರ್ವಜನಿಕ ಋಣ ಸ್ವೀಕೃತಿಗಳು ₹72,121 ಕೋಟಿಯಾಗಿತ್ತು.*

2020–21ರ ಅವಧಿಯಲ್ಲಿ ಸರಕು ಮತ್ತು ಸೇವಾ ತೆರಿಗೆಯಡಿಯಲ್ಲಿ ಒಟ್ಟು ಸ್ವೀಕೃತಿಗಳು ₹43,947.19 ಕೋಟಿಗಳಾಗಿದ್ದವು. 2020–21ರ ಅವಧಿಯಲ್ಲಿ ಸರಕು ಮತ್ತು ಸೇವಾ ತೆರಿಗೆ ಜಾರಿಯಿಂದ ಉಂಟಾದ ರಾಜಸ್ವದ ನಷ್ಟದ ಕಡೆಗೆ ರಾಜ್ಯವು ಒಟ್ಟು ₹26,196.26 ಕೋಟಿ ಪರಿಹಾರವನ್ನು ಪಡೆದುಕೊಂಡಿದೆ. ಈ ಪೈಕಿ ರಾಜಸ್ವ ಸ್ವೀಕೃತಿಗಳಲ್ಲಿ ರಾಜ್ಯಕ್ಕೆ ₹13,789.26 ಕೋಟಿ ಅನುದಾನ ಬಂದಿದೆ. ಆದರೆ, 2020–21ರ ಅವಧಿಯಲ್ಲಿ ಸರಕು ಮತ್ತು ಸೇವಾ ತೆರಿಗೆ ಪರಿಹಾರ ನಿಧಿಯಲ್ಲಿನ ಸಾಕಷ್ಟಿಲ್ಲದ ಶಿಲ್ಕಿನ ಕಾರಣ, ರಾಜ್ಯವು ಸರಕು ಮತ್ತು ಸೇವಾ ತೆರಿಗೆ ಪರಿಹಾರ ನಿಧಿಯಲ್ಲಿ ಸಂಗ್ರಹಿಸಲಾದ ಉಪಕರದಿಂದ ಮರುಪಾವತಿಯ ಬಾಧ್ಯತೆಗಳೊಂದಿಗೆ (ರಾಜ್ಯದ ಯಾವುದೇ ಇತರ ಸಂಪನ್ಮೂಲಗಳಿಂದಲ್ಲ) ರಾಜ್ಯ ಸರ್ಕಾರದ ಋಣ ಸ್ವೀಕೃತಿಗಳಡಿಯಲ್ಲಿ ₹12,407 ಕೋಟಿ ಬ್ಯಾಕ್–ಟು–ಬ್ಯಾಕ್ ಸಾಲವನ್ನು ಪಡೆದುಕೊಂಡಿತು. ಈ ವ್ಯವಸ್ಥೆಯಿಂದಾಗಿ, 2020–21ರ ಅವಧಿಯಲ್ಲಿನ ₹19,338 ಕೋಟಿ ರಾಜಸ್ವ ಕೊರತೆ ಮತ್ತು ₹67,098 ಕೋಟಿ ವಿತ್ತೀಯ ಕೊರತೆಯನ್ನು ಸರಕು ಮತ್ತು ಸೇವಾ ತೆರಿಗೆ ಪರಿಹಾರದ ಬದಲಾಗಿನ ₹12,407 ಕೋಟಿ ಋಣ ಸ್ವೀಕೃತಿಗಗಳೊಂದಿಗೆ ಎಂದು ಓದಬಹುದು.

ರಾಜ್ಯದ ರಾಜಸ್ವ ವೆಚ್ಚವು (₹1,76,054 ಕೋಟಿ) ಅದರ ಆಯವ್ಯಯ ಪ್ರಕ್ಷೇಪದ (₹1,79,776 ಕೋಟಿ) ಒಳಗೆ ಇದೆ. ಆದಾಗ್ಯೂ, 2020–21ರಲ್ಲಿ ಸಂಗ್ರಹವಾದ ರಾಜಸ್ವ ಸ್ವೀಕೃತಿಗಳು (₹1,56,716 ಕೋಟಿ) ಆಯವ್ಯಯ ಅಂದಾಜುಗಳಿಗೆ (₹1,79,920 ಕೋಟಿಗಳು) ಹೋಲಿಸಿದರೆ ಶೇಕಡ 13ರಷ್ಟು ಕಡಿಮೆಯಾಗಿದ್ದು, ಇದು ರಾಜಸ್ವ ಕೊರತೆಗೆ (₹19,338 ಕೋಟಿ) ಕಾರಣವಾಯಿತು.

ಆರ್ಥಿಕ ಇಲಾಖೆಯು ರಾಜಸ್ವ ಸ್ವೀಕೃತಿಯಲ್ಲಿನ ಕುಸಿತವು ಕೋವಿಡ್ 19/ ಸಾಂಕ್ರಾಮಿಕ ಪರಿಸ್ಥಿತಿಯಿಂದಾದ ಲಾಕ್ ಡೌನ್ ಹೇರಿಕೆಯು ಉತ್ಪಾದನೆ / ವ್ಯಾಪಾರ / ಸೇವಾ ವಲಯಗಳ ಮುಚ್ಚುವಿಕೆಯಲ್ಲಿ ಪರಿಣಮಿಸಿ ಆರ್ಥಿಕ ಚಟುವಟಿಕೆಗಳಲ್ಲಿ ನಿಧಾನಗತಿ ಉಂಟಾಯಿತು ಅಲ್ಲದೆ ಕೇಂದ್ರ ತೆರಿಗೆಗಳು ಮತ್ತು ಸುಂಕಗಳ ಪಾಲು ಮತ್ತು ಭಾರತ ಸರ್ಕಾರದಿಂದ ಪಡೆದ ಸಹಾಯಧನಗಳ ಇಳಿಕೆಯಿಂದಾಗಿದೆ ಎಂದು ಉತ್ತರಿಸಿದೆ (ಡಿಸೆಂಬರ್ 2021).

## 1.7 ಸರ್ಕಾರದ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಕಿರು ನೋಟ

ಸರ್ಕಾರದ ಲೆಕ್ಕಗಳು ಸರ್ಕಾರದ ಹಣಕಾಸಿನ ಹೊಣೆಗಾರಿಕೆಗಳನ್ನು ಮತ್ತು ವೆಚ್ಚದಿಂದ ಸೃಷ್ಟಿಸಲಾದ ಆಸ್ತಿಗಳನ್ನು ಬಿಂಬಿಸುತ್ತವೆ. ಹೊಣೆಗಾರಿಕೆಗಳು ಮುಖ್ಯವಾಗಿ ಆಂತರಿಕ ಸಾಲಗಳು, ಭಾರತ ಸರ್ಕಾದಿಂದ ಪಡೆದ ಸಾಲಗಳು ಮತ್ತು ಮುಂಗಡಗಳು, ಸಾರ್ವಜನಿಕ ಲೆಕ್ಕ ಮತ್ತು ಮೀಸಲು ನಿಧಿಗಳಡಿಯ ಸ್ವೀಕೃತಿಗಳನ್ನು ಒಳಗೊಂಡಿರುತ್ತವೆ ಮತ್ತು ಆಸ್ತಿಗಳು ಮುಖ್ಯವಾಗಿ ಬಂಡವಾಳ ವೆಚ್ಚ, ರಾಜ್ಯ ಸರ್ಕಾರ ನೀಡಿದ ಸಾಲಗಳು ಮತ್ತು ಮುಂಗಡಗಳು ಮತ್ತು ನಗದು ಶಿಲ್ಕುಗಳನ್ನು ಒಳಗೊಂಡಿರುತ್ತವೆ. ಆಸ್ತಿಗಳು ಮತ್ತು ಹೊಣೆಗಾರಿಕೆಗಳ ವೃದ್ಧಿಯ ದರದ ಅಂಗಗಳನ್ನು **ಕೋಷ್ಟಕ 1.3**ರಲ್ಲಿ ನೀಡಲಾಗಿದೆ ಮತ್ತು 31 ಮಾರ್ಚ್ 2020ರಲ್ಲಿದ್ದ ಸ್ಥಿತಿಗೆ ಸಂವಾದಿಯಾಗಿ 31 ಮಾರ್ಚ್ 2021ರಲ್ಲಿದ್ದಂತೆ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ವಿವರವಾದ ಸಾರಾಂಶವನ್ನು **ಅನುಬಂಧ 1.3**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.3: ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಸ್ಥಿತಿಯ ಸಾರಾಂಶ**

**(₹ ಕೋಟಿಗಳಲ್ಲಿ)**

| ಭಾದ್ಯತೆಗಳು | | | | | ಆಸ್ತಿಗಳು | | | | |
|---|---|---|---|---|---|---|---|---|---|
| | | 2019–20 | 2020–21 | ಶೇಕಡಾವಾರು ವೃದ್ಧಿ | | | 2019–20 | 2020–21 | ಶೇಕಡಾವಾರು ವೃದ್ಧಿ |
| ಸಂಚಿತ ನಿಧಿ | | | | | | | | | |
| ಅ | ಆಂತರಿಕ ಋಣ | 2,20,337 | 2,81,140 | 27.60 | a | ಒಟ್ಟು ಬಂಡವಾಳ ವೆಚ್ಚ | 3,05,798 | 3,51,201 | 14.85 |
| ಆ | ಭಾರತ ಸರ್ಕಾರದಿಂದ ಸಾಲಗಳು ಮತ್ತು ಮುಂಗಡಗಳು | 13,908 | 26,617* | 91.38 | b | ಸಾಲಗಳು ಮತ್ತು ಮುಂಗಡಗಳು | 28,847 | 31,246 | 8.32 |
| ಸಾದಿಲ್ವಾರು ನಿಧಿ | | 80 | 80 | 0.00 | ಸಾದಿಲ್ವಾರು ನಿಧಿ | | – | – | – |

| ಭಾದ್ಯತೆಗಳು | | | | | ಆಸ್ತಿಗಳು | | | | |
|---|---|---|---|---|---|---|---|---|---|
| | | 2019–20 | 2020–21 | ಶೇಕಡಾವಾರು ವೃದ್ಧಿ | | | 2019–20 | 2020–21 | ಶೇಕಡಾವಾರು ವೃದ್ಧಿ |
| ಸಾರ್ವಜನಿಕ ಲೆಕ್ಕ | | | | | | | | | |
| ಅ | ಸಣ್ಣ ಉಳಿತಾಯಗಳು, ಭವಿಷ್ಯನಿಧಿ ಮುಂತಾದವುಗಳು | 35,179 | 38,811 | 10.32 | ಅ | ಮುಂಗಡಗಳು | 7 | 7 | 0.00 |
| ಆ | ಠೇವಣಿಗಳು | 31,559 | 30,874 | (–)2.17 | ಆ | ಜಮೆಗಳು | 1,038 | 1,073 | 3.37 |
| ಇ | ಮೀಸಲು ನಿಧಿಗಳು | 37,599 | 43,873 | 16.69 | ಇ | ಅಮಾನತ್ತು ಮತ್ತು ಇತರೆ | – | – | – |
| ಈ | ಅಮಾನತ್ತು ಮತ್ತು ಇತರೆ | 5,297 | 2,377 | (–)55.13 | ನಗದು ಶಿಲ್ಕು (ಮೀಸಲು ನಿಧಿಯಲ್ಲಿನ ಹೂಡಿಕೆಗಳನ್ನು ಒಳಗೊಂಡು) | | **34,463** | **47,143** | **37** |
| ಉ | ಜಮೆಗಳು | – | – | – | **ಒಟ್ಟು** | | **3,70,153** | **4,30,670** | **16.35** |
| | ವೆಚ್ಚದ ಮೇಲಿನ ಸ್ವೀಕೃತಿಗಳ ಸಂಚಿತ ಹೆಚ್ಚುವರಿ | **26,194** | **6,898** | **(–)73.67** | ರಾಜಸ್ವ ಲೆಕ್ಕದಲ್ಲಿನ ಕೊರತೆ | | – | – | – |
| **ಒಟ್ಟು** | | **3,70,153** | **4,30,670** | **16.35** | **ಒಟ್ಟು** | | **3,70,153** | **4,30,670** | **16.35** |

*ಆಕರ: ಹಣಕಾಸು ಲೆಕ್ಕಗಳು*

** ಋಣ ಸ್ವೀಕೃತಿಗಳಡಿಯಲ್ಲಿ ರಾಜ್ಯಕ್ಕೆ ಬ್ಯಾಕ್–ಟು–ಬ್ಯಾಕ್ ಸಾಲವಾಗಿ ನೀಡಲಾದ ₹12,407 ಕೋಟಿ ಸರಕು ಮತ್ತು ಸೇವಾ ತೆರಿಗೆ ಪರಿಹಾರವನ್ನು, ಹಣಕಾಸು ಆಯೋಗವು ಸೂಚಿಸಬಹುದಾದ ಯಾವುದೇ ಮಾನದಂಡಗಳಿಗೆ ರಾಜ್ಯದ ಸಾಲವೆಂದು ಪರಿಗಣಿಸಲಾಗುವುದಿಲ್ಲ ಎಂದು ಭಾರತ ಸರ್ಕಾರದ ವೆಚ್ಚದ ಇಲಾಖೆಯು ನಿರ್ಧರಿಸಿರುವುದರಿಂದ ಭಾರತ ಸರ್ಕಾರದಿಂದ ನಿವ್ವಳ ಸಾಲಗಳು ಮತ್ತು ಮುಂಗಡಗಳು ₹14,210 ಕೋಟಿಯಾ ಗುತ್ತದೆ*

ಸಂಚಿತ ನಿಧಿಯಲ್ಲಿನ ಆಸ್ತಿಗಳ ವೃದ್ಧಿಯ ದರದ 2019–20ರಲ್ಲಿದ್ದ ಶೇಕಡ 13ರಿಂದ 2020–21ರಲ್ಲಿ ಶೇಕಡ 15ಕ್ಕೆ ಏರಿತು. ಆದರೆ ಆಯವ್ಯಯದ ಹೊರಗಿನ ಸಾಲಗಳನ್ನು ಹೊರತುಪಡಿಸಿ ಹೊಣೆಗಾರಿಕೆಗಳು 2019–20 ರಲ್ಲಿದ್ದ ಶೇಕಡ 22ರಿಂದ ಶೇಕಡ 28ಕ್ಕೆ ಏರಿತು. 2020–21 ರಲ್ಲಿ. ಎಲ್ಐಸಿ, ಜಿಐಸಿ, ನಬಾರ್ಡ್, ಎನ್‌ಸಿಡಿಸಿ ಇತ್ಯಾದಿಗಳ ಲೆಕ್ಕಗಳಲ್ಲಿನ ₹293.82 ಕೋಟಿಗಳ ವ್ಯತ್ಯಾಸವನ್ನು ಗಣನೆಗೆ ತೆಗೆದುಕೊಂಡ ನಂತರ ಹಣಕಾಸು ಲೆಕ್ಕಗಳು 2020–21ರ ಅಂತ್ಯದ ವೇಳೆಗೆ ಬಾಕಿ ಇರುವ ಆಂತರಿಕ ಋಣವು ₹2,81,140 ಕೋಟಿಗಳೆಂದು ತೋರಿಸಿದೆ. ರಾಜ್ಯದ ನಗದು ಶಿಲ್ಕು (ಭಾರತೀಯ ರಿಸರ್ವ್ ಬ್ಯಾಂಕಿನಲ್ಲಿ ಮೀಸಲಿಟ್ಟ ನಿಧಿಗಳ ಹೂಡಿಕೆ ಮತ್ತು ಠೇವಣಿ ಸೇರಿದಂತೆ) ವರ್ಷದ ಕೊನೆಯಲ್ಲಿ ₹47,143 ಕೋಟಿಗಳಷ್ಟಿದ್ದು. ನಗದು ಶಿಲ್ಕಿನಲ್ಲಿ (ಭಾರತೀಯ ರಿಸರ್ವ್ ಬ್ಯಾಂಕಿನಲ್ಲಿ ಮೀಸಲಿಟ್ಟ ನಿಧಿಗಳ ಹೂಡಿಕೆ ಮತ್ತು ಠೇವಣಿ ಸೇರಿದಂತೆ) ಹಿಂದಿನ ವರ್ಷಕ್ಕಿಂತ ಶೇಕಡ 37ರಷ್ಟು ಹೆಚ್ಚಾಗಿದೆ.

## 1.8 ಹಣಕಾಸಿನ ಪ್ರಮಿತಿಗಳು


ಮೂರು ಪ್ರಮುಖ ಹಣಕಾಸಿನ ಪ್ರಮಿತಿಗಳಾದ ರಾಜಸ್ವ, ವಿತ್ತೀಯ ಮತ್ತು ಪ್ರಾಥಮಿಕ ಕೊರತೆಗಳು ನಿರ್ದಿಷ್ಟ ಅವಧಿಯಲ್ಲಿ ಒಟ್ಟಾರೆ ಹಣಕಾಸಿನ ಅಸಮತೋಲನದ ಪ್ರಮಾಣವನ್ನು ಸೂಚಿಸುತ್ತವೆ.

ಕೊರತೆಯ ಸ್ವರೂಪವು ಹಣಕಾಸಿನ ನಿರ್ವಹಣೆಯಲ್ಲಿನ ವಿವೇಚನೆಯ ವ್ಯಾಪ್ತಿಯ ಸೂಚಕವಾಗಿದೆ. ಇದಲ್ಲದೆ, ಕೊರತೆಯನ್ನು ಭರಿಸಲು ಹಣಕಾಸು ಒದಗಿಸುವ ವಿಧಾನಗಳು ಮತ್ತು ಸಂಪನ್ಮೂಲಗಳ ಅನ್ವಯವು ಅದರ ಆರ್ಥಿಕ ಸ್ವಾಸ್ಥ್ಯಕ್ಕೆ ಪ್ರಮುಖ ಸೂಚಕಗಳಾಗಿವೆ. ಈ ವಿಭಾಗವು ಕೊರತೆಗಳ ಪ್ರವೃತ್ತಿಗಳು, ಸ್ವರೂಪ ಮತ್ತು ಪ್ರಮಾಣ ಮತ್ತು ಈ ಕೊರತೆಗಳಿಗೆ ಹಣಕಾಸು ಒದಗಿಸುವ ವಿಧಾನವನ್ನು ಪ್ರಸ್ತುತಪಡಿಸುತ್ತದೆ ಮತ್ತು 2020–21ರ ಆರ್ಥಿಕ ವರ್ಷಕ್ಕೆ ಕರ್ನಾಟಕ ವಿತ್ತೀಯ ಸುಧಾರಣಾ ಕಾಯಿದೆಯ ಅಡಿಯಲ್ಲಿ ನಿಗದಿಪಡಿಸಿದ ಗುರಿಗಳಿಗೆ ಹೋಲಿಸಿದರೆ ರಾಜಸ್ವ ಮತ್ತು ವಿತ್ತೀಯ ಕೊರತೆಗಳ ನೈಜಮಟ್ಟದ ಮೌಲ್ಯಮಾಪನವನ್ನು ಒದಗಿಸುತ್ತದೆ.

### *1.8.1 ಕೊರತೆ/ಹೆಚ್ಚಳದ ಪ್ರವೃತ್ತಿಗಳು*


2016–17 ರಿಂದ 2020–21 ರವರೆಗಿನ ಐದು ವರ್ಷಗಳ ಅವಧಿಯಲ್ಲಿ ಪ್ರಮುಖ ಹಣಕಾಸಿನ ಪ್ರಮಿತಿಗಳ ಹೆಚ್ಚಳ ಮತ್ತು ಕೊರತೆಗಳ ಪ್ರವೃತ್ತಿಯನ್ನು **ನಕ್ಷೆ–1.6**ರಲ್ಲಿ ಚಿತ್ರಿಸಲಾಗಿದೆ ಮತ್ತು ರಾಒಆಉತ್ಪಕ್ಕೆ ಹೋಲಿಸಿದರೆ ಹೆಚ್ಚಳ ಮತ್ತು ಕೊರತೆಯ ಪ್ರವೃತ್ತಿಯನ್ನು **ನಕ್ಷೆ–1.7**ರಲ್ಲಿ ನೀಡಲಾಗಿದೆ.

**ನಕ್ಷೆ – 1.6: ಕೊರತೆಯ ಪ್ರಮಿತಿಗಳಲ್ಲಿನ ಪ್ರವೃತ್ತಿಗಳು**




*ಆಕರ: ಆರ್ಥಿಕ ಮತ್ತು ಅಂಕಿ ಅಂಶಗಳ ನಿರ್ದೇಶನಾಲಯ, ಕರ್ನಾಟಕ ಸರ್ಕಾರ*

**ನಕ್ಷೆ – 1.7: ರಾಒಆಂಉಕ್ಕೆ ಸಂವಾದಿಯಾಗಿ ಹೆಚ್ಚಳ / ಕೊರತೆಯ ಪ್ರವೃತ್ತಿಗಳು**




*ಆಕರ: ಆರ್ಥಿಕ ಮತ್ತು ಅಂಕಿ ಅಂಶಗಳ ನಿರ್ದೇಶನಾಲಯ, ಕರ್ನಾಟಕ ಸರ್ಕಾರ*

2020–21ರಲ್ಲಿ, ರಾಜಸ್ವ ಕೊರತೆಯು ರಾಜಸ್ವ ವೆಚ್ಚಕ್ಕಿಂತ ರಾಜಸ್ವ ಸ್ವೀಕೃತಿಗಳಲ್ಲಿ ಶೇಕಡ 9.64[4]ರಷ್ಟು ಇಳಿಕೆಯಾಗಿರುವುದರಿಂದ ಉಂಟಾಗಿದೆ. ಈ ವರ್ಷದಲ್ಲಿ ವಿತ್ತೀಯ ಕೊರತೆಯು ಶೇಕಡ 76ರಷ್ಟು (₹28,932 ಕೋಟಿ) ಹೆಚ್ಚಾಗಿದ್ದು ಇದು ಬಂಡವಾಳ ವೆಚ್ಚದಲ್ಲಿನ ಶೇಕಡ 21.40ರಷ್ಟು (₹8,476 ಕೋಟಿ) ಹೆಚ್ಚಳದಿಂದ ಆಗಿದೆ.

[4] 2020–21ರ ರಾಜಸ್ವ ಸ್ವೀಕೃತಿ ಮತ್ತು ರಾಜಸ್ವ ವೆಚ್ಚಗಳ ವೃದ್ಧಿಯ ದರವು ಕ್ರಮವಾಗಿ ಶೇಕಡ (–)10.67 ಹಾಗೂ ಶೇಕಡ 1.03ರಷ್ಟಿತ್ತು. ಇವೆರಡರ ವ್ಯತ್ಯಾಸವು ಶೇಕಡ (–) 9.64ರಷ್ಟು ಇದೆ.

### *1.8.2 ವಿತ್ತೀಯ ಹೊಣೆಗಾರಿಕೆಗಳಲ್ಲಿನ ಪ್ರವೃತ್ತಿಗಳು ಮತ್ತು ರಾಒಆಂಉಕ್ಕೆ ಅದರ ಅನುಪಾತ*

2016–17ರಿಂದ 2020–21ರ ಅವಧಿಯಲ್ಲಿ ರಾಜ್ಯದ ಬಾಕಿ ಉಳಿದಿರುವ ಹಣಕಾಸಿನ ಹೊಣೆಗಾರಿಕೆಗಳ ಸಂಯೋಜನೆ ಮತ್ತು ರಾಒಆಂಉಕ್ಕೆ ಅದರ ಅನುಪಾತ ಇವುಗಳ ವಿವರಗಳನ್ನು **ಕೋಷ್ಟಕ–1.4** ನೀಡುತ್ತದೆ.

**ಕೋಷ್ಟಕ – 1.4: ಹಣಕಾಸಿನ ಹೊಣೆಗಾರಿಕೆಗಳಲ್ಲಿನ ಪ್ರವೃತ್ತಿಗಳು ಮತ್ತು ರಾಒಆಂಉಕ್ಕೆ ಅದರ ಅನುಪಾತ**

**(₹ ಕೋಟಿಗಳಲ್ಲಿ)**

| ಹೊಣೆಗಾರಿಕೆಗಳು | 2016–17 | 2017–18 | 2018–19 | 2019–20 | 2020–21 |
|---|---|---|---|---|---|
| ಆಂತರಿಕ ಋಣ | 1,32,489 | 1,48,581 | 1,79,309 | 2,20,337 | 2,81,140 |
| ಭಾರತ ಸರ್ಕಾರದ ಸಾಲಗಳು | 13,794 | 14,555 | 14,657 | 13,908 | 26,617* |
| ಸಾರ್ವಜನಿಕ ಲೆಕ್ಕ | 64,788 | 69,922 | 76,410 | 85,172 | 89,748 |
| ಆಯವ್ಯಯೇತರ ಸಾಲಗಳು | 10,248 | 13,173 | 14,862 | 18,103 | 18,421 |
| **ಒಟ್ಟು ಆರ್ಥಿಕ ಹೊಣೆಗಾರಿಕೆಗಳು** | **2,21,319** | **2,46,231** | **2,85,238** | **3,37,520** | **4,15,926** |
| ಜಿಎಸ್‌ಡಿಪಿಗೆ ಒಟ್ಟು ಹೊಣೆಗಾರಿಕೆಗಳು (ಶೇಕಡಾವಾರು) | 18.32 | 18.42 | 19.14 | 20.72 | 22.37 |
| ಗುರಿ (ಶೇಕಡಾವಾರು | 25.00 | 25.00 | 25.00 | 25.00 | 25.00 |

*ಆಕರ : ಹಣಕಾಸು ಲೆಕ್ಕಗಳು*

** ಋಣ ಸ್ವೀಕೃತಿಗಳಡಿಯಲ್ಲಿ ರಾಜ್ಯಕ್ಕೆ ಬ್ಯಾಕ್–ಟು–ಬ್ಯಾಕ್ ಸಾಲವಾಗಿ ನೀಡಲಾದ ₹12,407 ಕೋಟಿ ಸರಕು ಮತ್ತು ಸೇವಾ ತೆರಿಗೆ ಪರಿಹಾರವನ್ನು, ಹಣಕಾಸು ಆಯೋಗವು ಸೂಚಿಸಬಹುದಾದ ಯಾವುದೇ ಮಾನದಂಡಗಳಿಗೆ ರಾಜ್ಯದ ಸಾಲವೆಂದು ಪರಿಗಣಿಸಲಾಗುವುದಿಲ್ಲ ಎಂದು ಭಾರತ ಸರ್ಕಾರದ ವೆಚ್ಚದ ಇಲಾಖೆಯು ನಿರ್ಧರಿಸಿರುವುದರಿಂದ ಭಾರತ ಸರ್ಕಾರದಿಂದ ನಿವ್ವಳ ಸಾಲಗಳು ಮತ್ತು ಮುಂಗಡಗಳು ₹14,210 ಕೋಟಿಯಾಗಿತ್ತು.*

ಋಣ ಸ್ವೀಕೃತಿಗಳಡಿಯಲ್ಲಿ ರಾಜ್ಯಕ್ಕೆ ಬ್ಯಾಕ್–ಟು–ಬ್ಯಾಕ್ ಸಾಲವಾಗಿ ನೀಡಲಾದ ₹12,407 ಕೋಟಿ ಸರಕು ಮತ್ತು ಸೇವಾ ತೆರಿಗೆ ಪರಿಹಾರವನ್ನು, ಹಣಕಾಸು ಆಯೋಗವು ಸೂಚಿಸಬಹುದಾದ ಯಾವುದೇ ಮಾನದಂಡಗಳಿಗೆ ರಾಜ್ಯದ ಸಾಲವೆಂದು ಪರಿಗಣಿಸಲಾಗುವುದಿಲ್ಲ ಎಂದು ಭಾರತ ಸರ್ಕಾರದ ವೆಚ್ಚದ ಇಲಾಖೆಯು ನಿರ್ಧರಿಸಿರುವುದರಿಂದ, ಅದನ್ನು ಹೊರತುಪಡಿಸಿ ರಾಒಆಂಉಕ್ಕೆ ಬಾಕಿ ಇರುವ ಒಟ್ಟು ಋಣದ ಅನುಪಾತವನ್ನು (ಶೇಕಡ 22.37) ಲೆಕ್ಕ ಹಾಕಲಾಗಿದೆ

ರಾಜ್ಯದ ಹಣಕಾಸಿನ ಹೊಣೆಗಾರಿಕೆಗಳು 2016–17ರಲ್ಲಿನ ₹2,21,319 ಕೋಟಿಗಳಿಂದ 2020–21ರಲ್ಲಿ ₹4,15,926 ಕೋಟಿಗಳಿಗೆ ಮತ್ತು ಹಿಂದಿನ ವರ್ಷಕ್ಕಿಂತ ಶೇಕಡ 23ರಷ್ಟು ಹೆಚ್ಚಾಗಿದೆ. 2020–21ರ ಅವಧಿಯಲ್ಲಿ ಒಟ್ಟು ಹಣಕಾಸಿನ ಹೊಣೆಗಾರಿಕೆಗಳಲ್ಲಿ ಮಾರುಕಟ್ಟೆ ಸಾಲವನ್ನು ಒಳಗೊಂಡಿರುವ ಆಂತರಿಕ ಋಣವು ಶೇಕಡ 68 ಮತ್ತು ಸಾರ್ವಜನಿಕ ಲೆಕ್ಕದ ಜವಾಬ್ದಾರಿಗಳು ಶೇಕಡ 22ರಷ್ಟನ್ನು ಒಳಗೊಂಡಿವೆ. ರಾಒಆಂಉಕ್ಕೆ ಒಟ್ಟು ಹೊಣೆಗಾರಿಕೆಗಳು 2016–17ರಲ್ಲಿದ್ದ ಶೇಕಡ 18.32 ರಿಂದ 2020–21ರಲ್ಲಿ ಶೇಕಡ 22.37ಕ್ಕೆ ಏರಿದ್ದು ಹೆಚ್ಚುತ್ತಿರುವ ಪ್ರವೃತ್ತಿಯಲ್ಲಿದೆ ಆದರೆ ಕರ್ನಾಟಕ ವಿತ್ತೀಯ ಸುಧಾರಣಾ ಕಾಯಿದೆ / ಮಧ್ಯಂತರ ಹಣಕಾಸಿನ ಯೋಜನೆ (MTFP) ಅಡಿಯಲ್ಲಿ ಕಡ್ಡಾಯಗೊಳಿಸಲಾದ ಗರಿಷ್ಠ ಮಿತಿಯೊಳಗಿದೆ.

## 1.9 ರಾಜ್ಯದ ಹಣಕಾಸಿನ ಸ್ಥಿತಿ

ಕಾಲಕಾಲಕ್ಕೆ ತಿದ್ದುಪಡಿ ಮಾಡಲಾಗಿರುವ ಕರ್ನಾಟಕ ವಿತ್ತೀಯ ಸುಧಾರಣಾ ಕಾಯಿದೆ, 2002 ಅನ್ನು ಹಣಕಾಸಿನ ನಿರ್ವಹಣೆಯಲ್ಲಿ ಅಂತರ–ಉತ್ಪಾದಕ ಈಕ್ವಿಟಿಯನ್ನು ಮತ್ತು ದೀರ್ಘಾವಧಿಯ ಸಮಗ್ರ ಆರ್ಥಿಕ ಸ್ಥಿರತೆಯನ್ನು ಸಾಧಿಸುವ ಉದ್ದೇಶದಿಂದ ಜಾರಿಗೊಳಿಸಲಾಗಿದೆ.

### *1.9.1 ಪ್ರಮುಖ ಹಣಕಾಸಿನ ಪ್ರಮಿತಿಗಳ ಮೇಲೆ ಕರ್ನಾಟಕ ವಿತ್ತೀಯ ಸುಧಾರಣಾ ಕಾಯಿದೆ, 2002ರ ಗುರಿಗಳು ಮತ್ತು ಅದರ ಸಾಧನೆಗಳು*

ಕರ್ನಾಟಕ ವಿತ್ತೀಯ ಸುಧಾರಣಾ ಕಾಯಿದೆಯು ಋಣ ಮತ್ತು ಕೊರತೆಗಳ ಮೇಲಿನ ಮಿತಿಗಳ ಮೂಲಕ ಸಾಕಷ್ಟು ರಾಜಸ್ವ ಹೆಚ್ಚಳ ಮತ್ತು ವಿವೇಚನಾಯುಕ್ತ ಋಣ ನಿರ್ವಹಣೆಯನ್ನು ಕಲ್ಪಿಸಿದೆ. ರಾಜಸ್ವ ಮತ್ತು ವಿತ್ತೀಯ ಕೊರತೆಗಳ ಗುರಿಗಳನ್ನು ಅವುಗಳ ವಾಸ್ತವ ಮಟ್ಟಗಳನ್ನು **ಕೋಷ್ಟಕ–1.5**ರಲ್ಲಿ ನೀಡಲಾಗಿದೆ.

**ಕೋಷ್ಟಕ – 1.5: ಕರ್ನಾಟಕ ವಿತ್ತೀಯ ಸುಧಾರಣಾ ಕಾಯಿದೆಯ ಗುರಿಗಳ ಅನುಪಾಲನೆ**

| ಆರ್ಥಿಕ ನಿಯತಾಂಕಗಳು | ಕರ್ನಾಟಕ ವಿತ್ತೀಯ ಸುಧಾರಣಾ ಅಧಿನಿಯಮದ ಗುರಿ | ಸಾಧನೆ | | | | |
|---|---|---|---|---|---|---|
| | | 2016–17 | 2017–18 | 2018–19 | 2019–20 | 2020–21 |
| ರಾಜಸ್ವ ಹೆಚ್ಚಳ (+) / ಕೊರತೆ (–) (₹ ಕೋಟಿಗಳಲ್ಲಿ) | ರಾಜಸ್ವ ಹೆಚ್ಚಳವನ್ನು ನಿರ್ವಹಿಸುವುದು | 1,293 | 4,518 | 679 | 1,185 | (–)19,338 |
| | ರಾಜಸ್ವ ಹೆಚ್ಚಳವನ್ನು 2020–21ರಲ್ಲಿ ಕೋವಿಡ್–19ರ ಕಾರಣದಿಂದ ಸಾಧಿಸಲು ಸಾಧ್ಯವಾಗದಿರಬಹುದು | √ | √ | √ | √ | ರಾಜಸ್ವ ಕೊರತೆ ಬರಬಹುದು |
| ವಿತ್ತೀಯ ಕೊರತೆ (–) (ರಾಒಆಂಉಗೆ ಶತಾಂಶವಾಗಿ) | ಶೇಕಡ 3 (2019–20ರವರೆಗೆ) | 28,664 (2.37) | 31,101 (2.33) | 38,442 (2.58) | 38,166 (2.34) | 67,098 (3.72) |
| | ಶೇಕಡ 5 (2020–21) | √ | √ | √ | √ | √ |
| ರಾಒಆಂಉಗೆ ಒಟ್ಟು ಬಾಕಿಯಿರುವ ಋಣದ ಅನುಪಾತ (ಶತಾಂಶವಾಗಿ) | ಶೇಕಡ 25 | 18.32 | 18342 | 19.14 | 20.72 | 22.37* |
| | | √ | √ | √ | √ | √ |

**ಸೂಚಕಗಳನ್ನು ಲೆಕ್ಕಹಾಕುವಾಗ ಸರಕು ಮತ್ತು ಸೇವಾ ತೆರಿಗೆಯ ಅನುಷ್ಠಾನದಿಂದಾದ ಕೊರತೆಯ ಪರಿಹಾರವಾಗಿ ಭಾರತ ಸರ್ಕಾರದಿಂದ ಪಡೆದ ಬ್ಯಾಕ್–ಟು–ಬ್ಯಾಕ್ ಸಾಲ (₹12,407 ಕೋಟಿ)ವನ್ನು ಸಾಲವೆಂದು ಪರಿಗಣಿಸಿಲ್ಲ.*

ಋಣ ಸ್ವೀಕೃತಿಗಳಡಿಯಲ್ಲಿ ರಾಜ್ಯಕ್ಕೆ ಬ್ಯಾಕ್–ಟು–ಬ್ಯಾಕ್ ಸಾಲವಾಗಿ ನೀಡಲಾದ ₹12,407 ಕೋಟಿ ಸರಕು ಮತ್ತು ಸೇವಾ ತೆರಿಗೆ ಪರಿಹಾರವನ್ನು, ಹಣಕಾಸು ಆಯೋಗವು ಸೂಚಿಸಬಹುದಾದ ಯಾವುದೇ ಮಾನದಂಡಗಳಿಗೆ ರಾಜ್ಯದ ಸಾಲವೆಂದು ಪರಿಗಣಿಸಲಾಗುವುದಿಲ್ಲ ಎಂದು ಭಾರತ ಸರ್ಕಾರದ ವೆಚ್ಚದ ಇಲಾಖೆಯು ನಿರ್ಧರಿಸಿರುವುದರಿಂದ, ಅದನ್ನು ಹೊರತುಪಡಿಸಿ ರಾಒಆಂಉಕ್ಕೆ ಬಾಕಿ ಇರುವ ಒಟ್ಟು ಋಣದ ಅನುಪಾತವನ್ನು (ಶೇಕಡ 22.37) ಲೆಕ್ಕ ಹಾಕಲಾಗಿದೆ.

ಫೆಬ್ರವರಿ 2014ರಲ್ಲಿ ಕರ್ನಾಟಕ ವಿತ್ತೀಯ ಸುಧಾರಣಾ ಕಾಯಿದೆಯು 2002ರ ತಿದ್ದುಪಡಿಯ ಮೂಲಕ, ವಿಭಾಗ–2(ಜಿ) ಅಡಿಯಲ್ಲಿ ವ್ಯಾಖ್ಯಾನಿಸಲಾದ ಒಟ್ಟು ಹೊಣೆಗಾರಿಕೆಗಳ ವ್ಯಾಪ್ತಿಯನ್ನು ಸಾರ್ವಜನಿಕ ಉದ್ದಿಮೆಗಳು ಮತ್ತು ವಿಶೇಷ ಉದ್ದೇಶ ಸಾಧನಗಳು[5] ಮತ್ತು ಇತರೆ ಸಮಾನ ಸಾಧನಗಳ ಸಾಲಗಳನ್ನು ಸೇರಿಸಿ ವರ್ಧಿಸಲಾಗಿದ್ದು ಅವುಗಳ ಅಸಲು ಮತ್ತು/ಅಥವಾ ಬಡ್ಡಿಯನ್ನು ರಾಜ್ಯ ಆಯವ್ಯಯದಿಂದ ಪೂರೈಸಬೇಕಾಗಿದೆ. ಕಾಲಕಾಲದ ಹಣಕಾಸು ಆಯೋಗಗಳು ಸೂಚಿಸಿದ ಪ್ರಮಿತಿಗಳನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ಸರ್ಕಾರವು ವಿತ್ತೀಯ ಸುಧಾರಣಾ ಕಾಯಿದೆಗೆ ತಿದ್ದುಪಡಿ ಮಾಡುತ್ತಿದೆ. ರಾಜ್ಯ ಸರ್ಕಾರವು 2004–05 ರಿಂದ 2019–20 ರವರೆಗೆ ರಾಜಸ್ವ ಹೆಚ್ಚಳವನ್ನು ದಾಖಲಿಸಿದೆ ಮತ್ತು ವಿತ್ತೀಯ ಕೊರತೆ ಮತ್ತು ಋಣ/ರಾಒಆಂಉದ ಅನುಪಾತವು ಕಾಯಿದೆಯಡಿ ಸೂಚಿಸಿದಂತೆ ರಾಒಆಂಉದ ಶೇಕಡ ಮೂರು ಮತ್ತು ಶೇಕಡ 25ರ ಮಿತಿಯೊಳಗೆ ಇತ್ತು.

[5] ಸಾರ್ವಜನಿಕ ಉದ್ದಿಮೆಗಳು ಮತ್ತು ವಿಶೇಷ ಉದ್ದೇಶ ಸಾಧನಗಳು ಮಾಡುವ ಸಾಲಗಳು ಆಯವ್ಯಯದ ಹೊರಗಿನ ಸಾಲಗಳಾಗಿವೆ

2020–21 ರಲ್ಲಿ, ಕೋವಿಡ್ 19 ಸಾಂಕ್ರಾಮಿಕ ರೋಗದಿಂದಾಗಿ ರಾಜ್ಯ ಸರ್ಕಾರವು ಒಂದು ಸಲದ ರಿಯಾಯಿತಿಯಾಗಿ ವಿತ್ತೀಯ ಕೊರತೆಯನ್ನು ಅಂದಾಜು ಮಾಡಿದ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇಕಡ ಮೂರರಿಂದ ಶೇಕಡ ಐದಕ್ಕೆ ಹೆಚ್ಚಿಸಲು ವಿತ್ತೀಯ ಸುಧಾರಣಾ ಕಾಯಿದೆಗೆ ತಿದ್ದುಪಡಿ ಮಾಡಿದೆ. ಅಲ್ಲದೆ, ಕೋವಿಡ್ 19 ಸಾಂಕ್ರಾಮಿಕದ ಪರಿಣಾಮವಾಗಿ ಸ್ವೀಕೃತಿಗಳಲ್ಲಿ ಇಳಿಕೆಯಿಂದಾಗಿ ರಾಜ್ಯವು ರಾಜಸ್ವ ಕೊರತೆಯನ್ನು ನಿರೀಕ್ಷಿಸಿತ್ತು. ಅಂತೆಯೇ 2020–21ರಲ್ಲಿ ರಾಜ್ಯವು ರಾಜಸ್ವ ಕೊರತೆಯನ್ನು ಕಂಡಿದ್ದು, ಸರ್ಕಾರವು ಸಾಲವನ್ನು ರಾಜಸ್ವ ವೆಚ್ಚಕ್ಕೆ ಬಳಸಿಕೊಂಡಿದೆ ಎಂಬುದನ್ನು ಸೂಚಿಸುತ್ತದೆ. ಆದಾಗ್ಯೂ, ವಿತ್ತೀಯ ಕೊರತೆ, ಸಾಲ/ರಾಒಆಂಉ ಅನುಪಾತವು ಕಾಯಿದೆಯಡಿಯಲ್ಲಿ ನಿಗದಿಸಿದಂತೆ ಕ್ರಮವಾಗಿ ರಾಒಆಂಉದ ಶೇಕಡ ಐದು ಮತ್ತು ಶೇಕಡ 25ರ ಮಿತಿಯೊಳಗೆ ಇತ್ತು.

### *1.9.2 2020–21ರ ಮಧ್ಯಂತರ ವಿತ್ತೀಯ ಯೋಜನೆಯ ಪ್ರಕ್ಷೇಪಗಳಿಗೆ ಪ್ರತಿಯಾಗಿ ವಾಸ್ತವಗಳು*

ಕರ್ನಾಟಕ ವಿತ್ತೀಯ ಸುಧಾರಣಾ ಕಾಯಿದೆಯನ್ವಯ ರಾಜ್ಯ ಸರ್ಕಾರವು ವಾರ್ಷಿಕ ಆಯವ್ಯಯದೊಂದಿಗೆ ಐದು ವರ್ಷಗಳ ಹಣಕಾಸು ಯೋಜನೆಯನ್ನು ರಾಜ್ಯ ಶಾಸಕಾಂಗದ ಮುಂದೆ ಇಡಬೇಕು. ಮಧ್ಯಂತರ ವಿತ್ತೀಯ ಯೋಜನೆಯು ನಿಗದಿತ ಹಣಕಾಸಿನ ಸೂಚಕಗಳಿಗೆ ಐದು ವರ್ಷಗಳ ಆವರ್ತನ ಗುರಿಯನ್ನು ನಿಗದಿಪಡಿಸಿದೆ.

ಮಧ್ಯಂತರ ವಿತ್ತೀಯ ಯೋಜನೆಯು 2020–21ಕ್ಕೆ ಪ್ರಕ್ಷೆಪಿಸಿದ ಮತ್ತು ವಾಸ್ತವಗಳ ನಡುವಿನ ವ್ಯತ್ಯಾಸವನ್ನು **ಕೋಷ್ಟಕ 1.6**ರಲ್ಲಿ ಸೂಚಿಸಲಾಗಿದೆ.

**ಕೋಷ್ಟಕ 1.6: 2020–21ಕ್ಕೆ ಮಧ್ಯಂತರ ವಿತ್ತೀಯ ಯೋಜನೆಯ ಪ್ರಕ್ಷೇಪ ಮತ್ತು ವಾಸ್ತವಗಳು**

**(₹ ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ಆರ್ಥಿಕ ಸ್ಥಿರಾಂಕಗಳು | ಮ.ಅ.ವಿ.ಯೋ 2019–23ರ ಅನ್ವಯ ಪ್ರಕ್ಷೇಪಣೆಗಳು | ವಾಸ್ತವಗಳು (2020–21) | ವ್ಯತ್ಯಾಸ (ಶೇಕಡಾವಾರು) |
|---|---|---|---|---|
| 1 | ಸ್ವಂತ ತೆರಿಗೆ ರಾಜಸ್ವ | 1,32,552 | 97,052 | (–)26.78 |
| 2 | ತೆರಿಗೆಯೇತರ ರಾಜಸ್ವ | 8,378 | 7,894 | (–)5.78 |
| 3 | ಕೇಂದ್ರ ತೆರಿಗೆಗಳ ಪಾಲು | 43,787 | 21,694 | (–)50.46 |
| 4 | ಭಾರತ ಸರ್ಕಾರದ ಸಹಾಯಾನುದಾನಗಳು | 15,499 | 30,076 | 94.05 |
| 5 | ರಾಜಸ್ವ ಸ್ವೀಕೃತಿಗಳು (1+2+3+4) | 2,00,215 | 1,56,716 | (–)21.73 |
| 6 | ರಾಜಸ್ವ ವೆಚ್ಚ | 1,99,240 | 1,76,054 | (–)11.64 |
| 7 | ಒಟ್ಟು ಋಣ | 3,78,587 | 4,15,926* | 9.86 |
| 8 | ರಾಒಆಂಉ | 17,71,683 | 18,03,609 | 1.80 |
| 9 | ರಾಜಸ್ವ ಕೊರತೆ (–)/ಅಧಿಕ (+) (5–6) | 975 | (–)19,338 | (–)1,883.38 |
| 10 | ಆರ್ಥಿಕ ಕೊರತೆ (–)/ ಅಧಿಕ (+) | 51,379 | 67,098 | (–)30.59 |
| 11 | ಋಣ–ರಾಒಆಂಉ ಅನುಪಾತ (*ಶೇಕಡಾವಾರು*) | 21.37 | 22.37** | 1 |
| 12 | ಪ್ರಸ್ತುತ ಬೆಲೆಯಲ್ಲಿ ರಾಒಆಂಉ ವೃದ್ಧಿ ದರ (ಶೇಕಡಾವಾರು) | 11.50 | 10.72 | (–)0.78 |

*ಆಕರ: ಹಣಕಾಸು ಲೆಕ್ಕಗಳು ಮತ್ತು ಮಧ್ಯಂತರ ವಿತ್ತೀಯ ಯೋಜನೆ 2019–23*

** ಋಣ ಸ್ವೀಕೃತಿಗಳಡಿಯಲ್ಲಿ ರಾಜ್ಯಕ್ಕೆ ಬ್ಯಾಕ್–ಟು–ಬ್ಯಾಕ್ ಸಾಲವಾಗಿ ನೀಡಲಾದ ₹12,407 ಕೋಟಿ ಸರಕು ಮತ್ತು ಸೇವಾ ತೆರಿಗೆ ಪರಿಹಾರವನ್ನು, ಹಣಕಾಸು ಆಯೋಗವು ಸೂಚಿಸಬಹುದಾದ ಯಾವುದೇ ಮಾನದಂಡಗಳಿಗೆ ರಾಜ್ಯದ ಸಾಲವೆಂದು ಪರಿಗಣಿಸಲಾಗುವುದಿಲ್ಲ ಎಂದು ಭಾರತ ಸರ್ಕಾರದ ವೆಚ್ಚದ ಇಲಾಖೆಯು ನಿರ್ಧರಿಸಿರುವುದರಿಂದ, ಪರಿಣಾಮಕಾರಿ ಸಾಲವು ₹4,03,519 ಕೋಟಿಗಳಾಗುತ್ತದೆ ಮತ್ತು ಪರಿಣಾಮಕಾರಿ ವ್ಯತ್ಯಾಸವು ಶೇಕಡ 6.59 ಆಗುತ್ತದೆ.*

***ಸೂಚಕಗಳನ್ನು ಲೆಕ್ಕಹಾಕುವಾಗ ಸರಕು ಮತ್ತು ಸೇವಾ ತೆರಿಗೆಯ ಅನುಷ್ಠಾನದಿಂದಾದ ಕೊರತೆಯ ಪರಿಹಾರವಾಗಿ ಭಾರತ ಸರ್ಕಾರದಿಂದ ಪಡೆದ ಬ್ಯಾಕ್–ಟು–ಬ್ಯಾಕ್ ಸಾಲ* (₹12,407 ಕೋಟಿ) ವನ್ನು ಸಾಲವೆಂದು ಪರಿಗಣಿಸಿಲ್ಲ.

ಮೇಲಿನ ಕೋಷ್ಟಕದಲ್ಲಿ ನೋಡಿದಂತೆ, 2020–21ರಲ್ಲಿ ಎಲ್ಲಾ ಹಣಕಾಸಿನ ಪ್ರಮಿತಿಗಳಿಗೆ[6] ಸಂಬಂಧಿಸಿದಂತೆ ಮಧ್ಯಂತರ ವಿತ್ತೀಯ ಯೋಜನೆಯಲ್ಲಿ ಮಾಡಲಾದ ಪ್ರಕ್ಷೇಪಗಳಿಗೆ ಪ್ರತಿಯಾಗಿ ಅಂದರೆ, ರಾಒಆಂಉದ ವೃದ್ಧಿ ದರ, ರಾಜಸ್ವ ಕೊರತೆ ಮತ್ತು ಋಣ–ರಾಒಆಂಉ ಅನುಪಾತಕ್ಕೆ ಸಂಬಂಧಿಸಿದ ಪ್ರಕ್ಷೇಪಗಳನ್ನು ಮಧ್ಯಂತರ ವಿತ್ತೀಯ ಯೋಜನೆಯಲ್ಲಿ ಅಂದಾಜಿಸಿದ್ದುದಕ್ಕಿಂತಲೂ ರಾಜಸ್ವ ಸ್ವೀಕೃತಿಗಳಲ್ಲಿನ ಕಡಿಮೆ ವೃದ್ಧಿಯಿಂದಾಗಿ ಸಾಧಿಸಲಾಗಿಲ್ಲ.
ಆರ್ಥಿಕ ಇಲಾಖೆಯು ಕೋವಿಡ್ 19/ಸಾಂಕ್ರಾಮಿಕ ಪರಿಸ್ಥಿತಿಯಿಂದಾಗಿ ರಾಜಸ್ವ ಸ್ವೀಕೃತಿಗಳಲ್ಲಿ ಕುಸಿತವಾಗಿದೆ ಎಂದು ಪುನರುಚ್ಚರಿಸಿದೆ. (ಡಿಸೆಂಬರ್ 2021)

## 1.10 ಪ್ರಮುಖ ಹಣಕಾಸಿನ ಸೂಚಕಗಳ ಮೇಲೆ ಕೆಲವು ವಹಿವಾಟುಗಳ ಪ್ರಭಾವ

2020–21ರಲ್ಲಿನ ಕೆಲವು ಪ್ರಮುಖ ವಹಿವಾಟುಗಳ ಪರಿಶೀಲನೆಯು, ಹಣಕಾಸು ಲೆಕ್ಕಗಳಲ್ಲಿನ ಟಿಪ್ಪಣಿಗಳ **ಕಂಡಿಕೆ 9**ರಲ್ಲಿ ಮತ್ತು **ಕೋಷ್ಟಕ 1.7**ರಲ್ಲಿ ವಿವರಿಸಿದಂತೆ ಕೆಲವು ಲೆಕ್ಕ ಹೊಂದಾಣಿಕೆಗಳಿಂದ ರಾಜಸ್ವ ಕೊರತೆ ಮತ್ತು ವಿತ್ತೀಯ ಕೊರತೆಯು ಪ್ರಭಾವಿತವಾಗಿದೆ ಎಂಬುದನ್ನು ಪ್ರಕಟಪಡಿಸಿತು.

**ಕೋಷ್ಟಕ 1.7: 2020–21ರಲ್ಲಿ ಕೆಲವು ಪ್ರಮುಖ ವಹಿವಾಟುಗಳ ಪರಿಣಾಮ**

**(₹ ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ವಹಿವಾಟಿನ ಸ್ವರೂಪ | ರಾಜಸ್ವ ಹೆಚ್ಚಳ | | ವಿತ್ತೀಯ ಕೊರತೆ | |
|---|---|---|---|---|---|
| | | ಹೆಚ್ಚಿಗೆ ಹೇಳಿರುವುದು | ಕಡಿಮೆ ಹೇಳಿರುವುದು | ಹೆಚ್ಚಿಗೆ ಹೇಳಿರುವುದು | ಕಡಿಮೆ ಹೇಳಿರುವುದು |
| 1 | ರಾಜಸ್ವ ವೆಚ್ಚದ ಬದಲು ಬಂಡವಾಳ ವೆಚ್ಚದಡಿ ಭರಿಸಿರುವುದು | – | 100.00 | – | – |
| 2 | ರಾಜಸ್ವ ವೆಚ್ಚಕ್ಕೆ ಬಂಡವಾಳ ನಿಧಿಯನ್ನು ಬಳಸಿರುವುದು | – | 117.02 | – | – |
| 3 | ಮೀಸಲು ನಿಧಿಗೆ ಹಸಿರು ತೆರಿಗೆಯನ್ನು ವರ್ಗಾವಣೆ ಮಾಡದಿರುವುದು | – | 10.86 | – | 10.86 |
| 4 | ರಸ್ತ ಸುರಕ್ಷತಾ ಉಪಕರದಡಿಯಲ್ಲಿ ರಾಜಸ್ವ ವರ್ಗಾವಣೆ ಮಾಡದಿರುವುದು | – | 87.65 | – | 87.65 |
| 5 | ಬಡ್ಡಿ ಹೊಂದಾಣಿಕೆಗಳು | – | 11.56 | – | 11.56 |
| 6 | ಬಳಕೆಯಾಗದ ಪಂ.ರಾ.ಸಂಸ್ಥೆಗಳ ಅನುದಾನಗಳನ್ನು ಹಿಂಬರೆದಿರುವುದು | – | 1,621.30 | – | 1,621.30 |
| ಒಟ್ಟು | | – | **1,948.38** | – | **1,731.37** |

*ಆಕರ: ಲೆಕ್ಕಗಳಿಗೆ ಟಿಪ್ಪಣಿಗಳು 2020–21 ಮತ್ತು ಪರಿಶೋಧನೋತ್ತರದ ವಿಶ್ಲೇಷಣೆ*

ಮೇಲೆ ಕಾಣಿಸಿದ ವಹಿವಾಟುಗಳನ್ನು ಕೆಳಗೆ ಚರ್ಚಿಸಲಾಗಿದೆ:

- **ಅಧ್ಯಾಯ 3ರ ಕಂಡಿಕೆ 3.7.2.2**ರಲ್ಲಿ ಚರ್ಚಿಸಿರುವಂತೆ ಗೃಹ ಮತ್ತು ಸಾರಿಗೆ ಇಲಾಖೆಗೆ ಸಂಬಂಧಿಸಿದ ₹ 100.00 ಕೋಟಿಗಳ ಮೊತ್ತದ ಸಹಾಯಾನುದಾನ – ಸಾಮಾನ್ಯ ಶೀರ್ಷಿಕೆ ಅಡಿಯ ವೆಚ್ಚವನ್ನು ರಾಜಸ್ವ ವೆಚ್ಚದ ಬದಲಿಗೆ ಬಂಡವಾಳ ಶೀರ್ಷಿಕೆಯಡಿ ಲೆಕ್ಕ ಮಾಡಲಾಗಿದೆ. ಅಲ್ಲದೆ, ₹ 117.02 ಕೋಟಿಗಳ ರಾಜಸ್ವ ಸ್ವರೂಪದ (ಸಂಬಳ) ವೆಚ್ಚವನ್ನು ಬಂಡವಾಳ ವೆಚ್ಚದಡಿ ಭರಿಸಿದ್ದು **ಅಧ್ಯಾಯ–3ರ ಕಂಡಿಕೆ 3.7.2.3**ರಲ್ಲಿ ಚರ್ಚಿಸಲಾಗಿದೆ.
- ಹಸಿರು ತೆರಿಗೆ ಉಪಕರ (₹.10.86 ಕೋಟಿ) ಮತ್ತು ರಸ್ತೆ ಸುರಕ್ಷತಾ ಉಪಕರ (₹ 87.65 ಕೋಟಿ)ಗಳನ್ನು ರಾಜ್ಯದ ಸಂಚಿತ ನಿಧಿಯಡಿ ಸಂಗ್ರಹಿಸಲಾಗಿದ್ದು ಮೀಸಲು ನಿಧಿಗಳಡಿ ಇರುವ

---

[6] ರಾಜಸ್ವ ಹೆಚ್ಚಳ/ಕೊರತೆ, ವಿತ್ತೀಯ ಕೊರತೆ, ಋಣ–ರಾಒಆಂಉ ಅನುಪಾತ ಮತ್ತು ಪ್ರಸಕ್ತ ದರಗಳಲ್ಲಿ ರಾಒಆಂಉದ ವೃದ್ಧಿಯ ದರ ಮುಂತಾದ ವಿತ್ತೀಯ ಸೂಚಕಗಳು.

ನಿಧಿ ಲೆಕ್ಕಕ್ಕೆ ವರ್ಗಾಯಿಸಲಾಗಿಲ್ಲ. ಇದನ್ನು **ಅಧ್ಯಾಯ–2ರ ಕಂಡಿಕೆ 2.6.2(ಬಿ)** ನಲ್ಲಿ ಚರ್ಚಿಸಲಾಗಿದೆ.

- ರಾಜ್ಯ ಸರ್ಕಾರವು ಮೀಸಲು ನಿಧಿಗಳು ಮತ್ತು ಬಡ್ಡಿಯನ್ನು ಹೊಂದಿರುವ ಠೇವಣಿಗಳ ಅಡಿಯಲ್ಲಿ ಇರುವ ಹೂಡಿಕೆ ಮಾಡದ ಶಿಲ್ಕುಗಳ ಮೇಲೆ ಬಡ್ಡಿಯನ್ನು ಪಾವತಿಸುವ ಅಗತ್ಯವಿದೆ. ವರ್ಷದ ಆರಂಭದಲ್ಲಿ ಹೂಡಿಕೆ ಮಾಡದ ಶಿಲ್ಕುಗಳು ಇತರೆ ಠೇವಣಿಗಳು–ಸರ್ಕಾರಿ ನೌಕರರ ನಿರ್ಧಾರಿತ ವಂತಿಗೆ ಪಿಂಚಣಿ ಯೋಜನೆಯಡಿ **₹49.16ಕೋಟಿಗಳು** ಮತ್ತು ಮೀಸಲು ನಿಧಿಗಳು—ರಾಜ್ಯ ಪರಿಹಾರ ಅರಣ್ಯೀಕರಣ ನಿಧಿ ಅಡಿಯಲ್ಲಿ **₹1,273.30 ಕೋಟಿಗಳಷ್ಟಿವೆ.** ರಾಜ್ಯ ಪರಿಹಾರ ಅರಣ್ಯೀಕರಣ ನಿಧಿಯ ಮೇಲಿನ ಬಡ್ಡಿ ಹೊಣೆಗಾರಿಕೆಯು ಶೇಕಡ 4 ಮತ್ತು ಸರ್ಕಾರಿ ನೌಕರರ ನಿರ್ಧರಿತ ವಂತಿಗೆ ಪಿಂಚಣಿ ಯೋಜನೆಯಡಿಯ ಶಿಲ್ಕಿನ ಮೇಲಿನ ಶೇಕಡ 7.1ರಂತೆ ಬಡ್ಡಿಯ ಹೊಣೆಗಾರಿಕೆಯು ₹54.42 ಕೋಟಿಗಳಷ್ಟಿದ್ದು ಇದರಲ್ಲಿ **₹.11.56 ಕೋಟಿಗಳಿಗೆ** ಅವಕಾಶ ಕಲ್ಪಿಸಿಲ್ಲ.
- ಕ್ರಮ ಸಂಖ್ಯೆ 6ಕ್ಕೆ ಸಂಬಂಧಿಸಿದಂತೆ, ರಾಜ್ಯ ಸರ್ಕಾರವು ಡಿಸೆಂಬರ್ 2016ರಲ್ಲಿ ಆದೇಶದ ಮೂಲಕ ನಿರ್ದಿಷ್ಟ ವರ್ಷದ ಖರ್ಚು ಮಾಡದ ಶಿಲ್ಕುಗಳ ಹೊಂದಾಣಿಕೆಯನ್ನು ತಕ್ಷಣದ ಮರು ವರ್ಷದ ಆಯವ್ಯಯದಲ್ಲಿ ಮಾಡಲಾಗುವುದು ಎಂದು ನಿಗದಿ ಪಡಿಸಿತ್ತು. ಅದರಂತೆ, ರಾಜ್ಯ ಸರ್ಕಾರವು ಮಾರ್ಚ್ 2021ರಲ್ಲಿ ಸಾರ್ವಜನಿಕ ಲೆಕ್ಕದಿಂದ (ಪ್ರಧಾನ ಶೀರ್ಷಿಕೆ 8448) 2018–19ನೇ ಸಾಲಿಗೆ ಜಿಲ್ಲಾಪಂಚಾಯತ್‌ಗಳಿಗೆ ಸಂಬಂಧಿಸಿದ ₹882.49 ಕೋಟಿ ಮತ್ತು ತಾಲ್ಲೂಕು ಪಂಚಾಯತಿಗಳಿಗೆ ಸಂಬಂಧಿಸಿದ ₹738.81 ಕೋಟಿ ವೆಚ್ಚವಾಗದ ಮೊತ್ತವನ್ನು ಲೆಕ್ಕಗಳಲ್ಲಿ ಹಿಂಬರೆಯಲು ಅನುಮೋದನೆ ನೀಡಿತು. ಇದು ಪ್ರಸಕ್ತ ವರ್ಷದಲ್ಲಿ ವೆಚ್ಚವನ್ನು ಮರೆ ಮಾಡಲು ಕಾರಣವಾಯಿತು. ಇದು ರಾಜಸ್ವ ಕೊರತೆ ಮತ್ತು ವಿತ್ತೀಯ ಕೊರತೆಯನ್ನು **₹1,621.30 ಕೋಟಿಗಳಷ್ಟು** ಕಡಿಮೆಗೊಳಿಸಿದೆ.

  ಸರ್ಕಾರಿ ಆದೇಶದ (ಡಿಸೆಂಬರ್ 2016) ನಿಬಂಧನೆಗಳ ಪ್ರಕಾರ ಜಿಲ್ಲಾಪಂಚಾಯತ್‌ನ ನಿಧಿ II ರಲ್ಲಿ ಖರ್ಚು ಮಾಡದೆ ಉಳಿದಿರುವ ಮೊತ್ತವನ್ನು ಸಂಚಿತ ನಿಧಿಗೆ ಹಿಂತಿರುಗಿಸಲಾಗಿದೆ ಎಂದು ಆರ್ಥಿಕ ಇಲಾಖೆಯು (ಡಿಸೆಂಬರ್ 2021) ಹೇಳಿದೆ. ಅಲ್ಲದೆ, ಇಲಾಖೆಯು ಒಮ್ಮೆ ಖಜಾನೆ–2 ಸ್ಥಿರಗೊಂಡರೆ, ಹಿಂಬರೆಯುವಿಕೆಯನ್ನು ವರ್ಷಾಂತ್ಯದ ಸ್ವಯಂಚಾಲಿತ ಪ್ರಕ್ರಿಯೆಯಾಗಿಸಬಹುದು ಎಂದು ಹೇಳಿದೆ (ಮಾರ್ಚ್ 2021). ನಿರ್ಗಮನ ಸಮಾಲೋಚನೆಯಲ್ಲಿ ಆರ್ಥಿಕ ಇಲಾಖೆಯು ಮೊದಲ ಹಂತವಾಗಿ, ಬಳಕೆಯಾಗದ ಮೊತ್ತವನ್ನು ಹಿಂಬರೆಯಲು ಅಂತರವನ್ನು ಎರಡು ವರ್ಷದಿಂದ ಒಂದು ವರ್ಷಕ್ಕೆ ಕಡಿಮೆ ಮಾಡುತ್ತದೆ ಎಂದು ಹೇಳಿದೆ.

  ಆದಾಗ್ಯೂ, ಅದೇ ಹಣಕಾಸು ವರ್ಷದಲ್ಲಿ ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯಿತ್ ನಿಧಿಗಳ ಖರ್ಚು ಮಾಡದ ಮೊತ್ತವನ್ನು ಹಿಂಬರೆಯುವವರೆಗೆ, ಹಣಕಾಸಿನ ಸೂಚಕಗಳ ಮೇಲಿನ ಪರಿಣಾಮವು ಇದ್ದೇ ಇರುತ್ತದೆ.